ಜನಮನದ ದನಿ

ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

ಅಭಿಮಾನಿಗಳನ್ನು ಸೆಳೆದ ಕೆಜಿಎಫ್‌ನ ಗಲೀ ಗಲೀ ನೃತ್ಯದ ಬೆಡಗಿ ಮೌನಿ ರಾಯ್...



10 ಡಿಸೆಂಬರ್ 2025 ಬುಧವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 268 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಪ್ರವಾಸೋದ್ಯಮಕ್ಕೆ ಎರವಾದ ಸಫಾರಿ ಬಂದ್ » 2

ಪೋಕ್ಸೊ-ಬಾಲಗರ್ಭಿಣಿ ಪ್ರಕರಣಗಳ ತಡೆಗಟ್ಟಿ » 3

ಬೇಲೂರಿನಲ್ಲಿ ಪಾರ್ಕಿಂಗ್ ಹೆಸರಲ್ಲಿ ಬೇಕಾಬಿಟ್ಟಿ ಶುಲ್ಕ » 4

ಹೇಮಾವತಿ ನಾಲೆ ಅಭಿವೃದ್ಧಿಗೆ 110 ಕೋ.ರೂ.

ಶೀಘ್ರದಲ್ಲೇ ಕಾಮಗಾರಿ | ವಿಧಾನಸಭೆ ಕಲಾಪದಲ್ಲಿ ಡಿ.ಕೆ.ಶಿವಕುಮಾರ್ ವಾಗ್ದಾನ

• ಪ್ರಜೋದಯ ವರದಿ

ಬೆಳಗಾವಿ: ಹೇಮಾವತಿ ಎಡದಂಡೆಯ ವಿತರಣಾ ನಾಲೆಗಳ ಅಭಿವೃದ್ಧಿಗೆ 110 ಕೋ. ರೂ. ಅಂದಾಜು ವೆಚ್ಚದಲ್ಲಿ ಯೋಜನೆ ರೂಪಿಸಲಾಗಿದೆ. ಶೀಘ್ರವಾಗಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದೆಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಭರವಸೆ ನೀಡಿದರು.

ವಿಧಾನಸಭೆ ಪ್ರಶ್ನೋತ್ತರ ಕಲಾಪದ ವೇಳೆ, ಹೇಮಾವತಿ ಎಡದಂಡೆ ವಿತರಣಾ ನಾಲೆಗಳ ಕೊನೆಯ ಭಾಗಕ್ಕೆ ನೀರು ತಲುಪುತ್ತಿಲ್ಲ ಹಾಗು ಅಭಿವೃದ್ಧಿ ಕೆಲಸಗಳ ನಿಧಾನಗತಿಯ ಬಗ್ಗೆ ಶ್ರವಣಬೆಳಗೊಳ ಕ್ಷೇತ್ರದ ಶಾಸಕ ಸಿ.ಎನ್.ಬಾಲಕೃಷ್ಣ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಹೇಮಾವತಿ ವಿತರಣಾ ನಾಲೆ ಸಂಖ್ಯೆ 33ಕ್ಕೆ 10 ಕೋ.ರೂ., 34 ರಿಂದ 40 ರವರೆಗಿನ ನಾಲೆಗಳಿಗೆ 5 ಕೋ. ರೂ.ನೀಡಲಾಗಿದೆ. ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರದ ಎಡದಂಡೆ ನಾಲೆ ವಿಭಾಗದಲ್ಲಿ ಒಟ್ಟು 14 ರಲ್ಲಿ ಎಂಟು ನಾಲೆಗಳ ಅಭಿವೃದ್ಧಿ ಮಾಡಲಾಗುತ್ತಿದೆ. ಇಲ್ಲಿ ಒಂದಷ್ಟು ಹಳೆಯ ನಾಲೆಗಳಿವೆ. ಅವುಗಳ ಬಗ್ಗೆ ವರದಿ ತರಿಸಿಕೊಂಡಿದ್ದೇನೆ ಎಂದರು.

ಚನ್ನರಾಯಪಟ್ಟಣ ಅಮಾನಿಕೆರೆಗೆ ಹೇಮಾವತಿ ನೀರು ತುಂಬಿಸುವ ಕೆಲಸ ಹಾಗು ಭೂಪರಿಹಾರಕ್ಕೆ ತ್ವರಿತ ಕ್ರಮ ಕೈಗೊಳ್ಳಿ ಎಂದು ಶಾಸಕರು ಮನವಿ ಮಾಡಿದರು. ಇದರ ಬಗ್ಗೆ ಪ್ರತ್ಯೇಕ ಪ್ರಶ್ನೆಯನ್ನು ಕೇಳಿ ಹಾಗು ನನಗೆ ಭೂ ಸ್ವಾಧೀನದ ಬಗ್ಗೆ ಮಾಹಿತಿ ಇಲ್ಲವೆಂದು ಸಚಿವ ಡಿ.ಕೆ.ಶಿವಕುಮಾರ್ ಪ್ರತಿಕ್ರಿಯಿಸಿದರು.

ಅನಧಿಕೃತ ಪಂಪ್ ಸೆಟ್‌ಗೆ ಕಡಿವಾಣ

ನೀರಾವರಿ ಯೋಜನೆಗಳಲ್ಲಿ ಕೊನೆಯ ಭಾಗಕ್ಕೆ ನೀರು ತಲುಪಿಸಲು ಅಡ್ಡಿಯಾಗಿರುವ ಅನಧಿಕೃತ ಪಂಪ್ ಸೆಟ್‌ಗಳಿಗೆ ಕಡಿವಾಣ ಹಾಕಲು ಕಠಿಣ ಕ್ರಮ ಜರುಗಿಸುವುದಾಗಿ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು.

ಎತ್ತಿನಹೊಳೆ ಯೋಜನೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ನೀರಾವರಿ ಭಾಗದಲ್ಲಿನ ಪ್ರದೇಶದಲ್ಲಿ ನಾಲೆಗಳಿಗೆ ಅನಧಿಕೃತವಾಗಿ ಅಳವಡಿಸುವ ಪಂಪ್

ಸೆಟ್‌ಗಳನ್ನು ತೆರವು ಮಾಡಲು ಯೋಜನೆ ರೂಪಿಸಿದ್ದೇವೆ. ಈಗಾಗಲೇ ತರಬೇತಿ ನೀಡಲಾಗುತ್ತಿದೆ ಎಂದು ಹೇಳಿದರು.

ಸದನದ ಗೌರವ ಹೆಚ್ಚಿಸಿ: ಸಿಎಂ

ವಿರೋಧ ಪಕ್ಷದವರು ಅಸತ್ಯ ನುಡಿಯುವುದನ್ನು ಸಾಧ್ಯವಾದಷ್ಟು ನಿಲ್ಲಿಸಿ, ವಾಸ್ತವದ ತಳಹದಿಯ ಮೇಲೆ ಟೀಕೆ ಮಾಡಬೇಕು. ಉತ್ತರ ಕೊಡುವಾಗ ದಾರಿ ತಪ್ಪಿಸದೆ ಸದನದ ಗೌರವವನ್ನು ಎತ್ತಿಹಿಡಿಯುವ ಕೆಲಸ ಮಾಡಬೇಕೆಂದು ಸಿದ್ದರಾಮಯ್ಯ ಅವರು ಪ್ರತಿಪಕ್ಷಗಳಿಗೆ ಕಿವಿಮಾತು ಹೇಳಿದರು.

ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಅವರು ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಸದನದಲ್ಲಿ ಮಾತನಾಡುವ ಸಂದರ್ಭದಲ್ಲಿ ರೈತರಿಗೆ ಸರ್ಕಾರ ಪರಿಹಾರ ನೀಡಿಲ್ಲ, ಪರಿಹಾರ ಕೊಡಲು ಸರ್ಕಾರದ ಬಳಿ ಹಣವಿಲ್ಲವೆಂದಾಗ ಮಧ್ಯ ಪ್ರವೇಶಿಸಿದ ಸಚಿವ ಕೃಷ್ಣಬೈರೇಗೌಡ ಅವರು, ಕಳೆದ ಸಾಲಿನಲ್ಲಿ 38 ಲಕ್ಷ ರೈತರಿಗೆ ಪರಿಹಾರ ನೀಡಲಾಗಿದೆ. ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದರೂ ಈವರೆಗೆ ಒಂದು ಪೈಸೆ ಹಣ ಬಿಡುಗಡೆಯಾಗಿಲ್ಲ. 2245

» ನಾಲ್ಕನೇ ಪುಟದಲ್ಲಿ

ಸುವರ್ಣ ಸೌಧ ಮುತ್ತಿಗೆಗೆ ಯತ್ನ

ರೈತರ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಬೆಳಗಾವಿಯಲ್ಲಿ ಬಿಜೆಪಿ ನಾಯಕರು ಪ್ರತಿಭಟನೆ ನಡೆಸಿದರು. ರೈತರೊಂದಿಗೆ ಸುವರ್ಣ ಸೌಧ ಮುತ್ತಿಗೆಗೆ ಯತ್ನಿಸಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಸಿ.ಟಿ.ರವಿ ಸೇರಿ ಹಲವು ನಾಯಕರನ್ನು ಪೊಲೀಸರು ವಶಕ್ಕೆ ಪಡೆದರು. ಈ ವೇಳೆ ಪ್ರತಿಭಟನಾಕಾರರು-ಪೊಲೀಸರ ನಡುವೆ ತಳ್ಳಾಟ, ನೂಕಾಟ ನಡೆಯಿತು. ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಮತ್ತು ವಿಧಾನ ಪರಿಷತ್ತಿನ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಹಲವಾರು ಶಾಸಕರು ಭಾಗವಹಿಸಿದ್ದರು.

ಬಂಡಿಶೆಟ್ಟಿಹಳ್ಳಿ ಶಾಂತಿ ಸಭೆಯಲ್ಲಿ ಮೂಡದ ಒಮ್ಮತ

ಸಭೆ ಮುಂದೂಡಿಕೆ

• ಪ್ರಜೋದಯ ವರದಿ

ಹೊಳೆನರಸೀಪುರ: ತಾಲ್ಲೂಕಿನ ಬಂಡಿಶೆಟ್ಟಿಹಳ್ಳಿ ಗ್ರಾಮದಲ್ಲಿ ವಿವಾದಕ್ಕೆ ಕಾರಣವಾಗಿದ್ದ ನಾಡಪ್ರಭು ಕೆಂಪೇಗೌಡರ ಪ್ರತಿಮೆ ಹಾಗು ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ನಾಮಫಲಕ ಅಳವಡಿಕೆ ವಿಚಾರಕ್ಕೆ ಸಂಬಂಧಿಸಿ ಮಂಗಳವಾರ ಕರೆದಿದ್ದ ಶಾಂತಿ ಸಭೆ ಎರಡೂ ಗುಂಪಿನ ನಡುವೆ ಒಮ್ಮತ ಮೂಡಿಬಾರದ ಹಿನ್ನಲೆಯಲ್ಲಿ ಮುಂದೂಡಲ್ಪಟ್ಟಿತು.

ತಹಶೀಲ್ದಾರ್ ವೈ.ಎಂ.ರೇಣುಕುಮಾರ್ ಅಧ್ಯಕ್ಷತೆಯಲ್ಲಿ ಸಭೆ ಹಮ್ಮಿಕೊಳ್ಳಲಾಗಿತ್ತು. ಜಾಗದ ವಿಚಾರವಾಗಿ ಹುಟ್ಟಿಕೊಂಡಿರುವ ವಿವಾದವನ್ನು ಕಾನೂನು ಪ್ರಕಾರ ಬಗೆಹರಿಸ ಬೇಕಿದ್ದು, ವಾರದ ಬಳಿಕ ಮತ್ತೊಮ್ಮೆ ಸಭೆ ನಡೆಸಲಾಗುವುದೆಂದು ತಹಶೀಲ್ದಾರ್ ತಿಳಿಸಿದರು.

2012ರ ಸರ್ಕಾರದ ಸುತ್ತೋಲೆ ಪ್ರಕಾರ ಸರ್ಕಾರಿ ಜಾಗದಲ್ಲಿ ಮಹನೀಯರ ಪುತ್ಥಳಿ, ನಾಮಫಲಕ ಅಳವಡಿಸುವಂತಿಲ್ಲ. ಸ್ವಂತ ಜಾಗದಲ್ಲೇ ಸ್ಥಾಪಿಸುವಂತಿದ್ದರೆ ಜಾಗದ ಮಾಲೀಕರಿಂದ

ಮುಚ್ಚಳಿಕೆ ಬರೆದು ಸರ್ಕಾರದ ಅನುಮತಿ ಪಡೆಯಬೇಕು. ಎರಡೂ ಕಡೆಯವರು ಈ ನಿಯಮ ಪಾಲಿಸಿಲ್ಲ. ಮೊದಲು ಜಾಗದ ಸರ್ವೆ ಮಾಡಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದರು.

ವಿವಾದಕ್ಕೆ ಕಾರಣವೇನು

ಕೆರಗೋಡು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಂಡಿಶೆಟ್ಟಿಹಳ್ಳಿಯಲ್ಲಿ ಒಕ್ಕಲಿಗ ಸಮುದಾಯದವರು ಜುಲೈನಲ್ಲಿ ಕೆಂಪೇಗೌಡರ ಪ್ರತಿಮೆ ಪ್ರತಿಷ್ಠಾಪಿಸಿದ್ದಾರೆ. ಇತ್ತೀಚೆಗೆ ಎಸ್‌ಸಿ-ಎಸ್‌ಟಿ ಸಮಾಜದವರು ಅಂಬೇಡ್ಕರ್ ಭಾವಚಿತ್ರವಿರುವ ನಾಮಫಲಕವನ್ನು ಕೆಂಪೇಗೌಡ ಪ್ರತಿಮೆ ಪಕ್ಕದಲ್ಲೇ ಅಳವಡಿಸಿದ್ದು, ವಿವಾದದ ಕೇಂದ್ರ ಬಿಂದುವಾಗಿದೆ. ಕೆಂಪೇಗೌಡ ಜಯಂತಿ ಅಥವಾ ಮತ್ತಿತರ ಕಾರ್ಯಕ್ರಮದ ವೇಳೆ ಅಂಬೇಡ್ಕರ್ ನಾಮಫಲಕಕ್ಕೆ ಹಾನಿಯಾದರೆ, ಸಂಭ್ರಮಾಚರಣೆ ವೇಳೆ ಅಚಾತುರ್ಯದಿಂದ ಪಟಾಕಿ ಸಿಡಿದರೆ, ಸ್ವಚ್ಛತಾ ಸಂದರ್ಭದಲ್ಲಿ ಕಸ ಕಡ್ಡಿ ಬಿದ್ದರೆ ಕ್ಷುಲ್ಲಕ ಕಾರಣಕ್ಕೆ ಗಲಾಟೆಯಾಗುವ ಸಂಭವವಿರುತ್ತದೆ. ಇಬ್ಬರೂ ಸಮಾಜ ಸುಧಾರಕರೇ ಆಗಿದ್ದಾರೆ. ಮಹನೀಯರಿಗೆ ನಾವು ಗೌರವ ನೀಡಬೇಕೆಂದರೆ ಬೇರೆ ಬೇರೆ ಜಾಗದಲ್ಲಿ ಪ್ರತಿಷ್ಠಾಪಿಸಬೇಕೆಂದು ಒಕ್ಕಲಿಗ ಸಮುದಾಯ ಮುಖಂಡರು ಪ್ರತಿಪಾದಿಸಿದರು.

ಅದಕ್ಕೆ ಎಸ್‌ಸಿ, ಎಸ್‌ಟಿ ಸಮುದಾಯದವರು ಆಕ್ಷೇಪ ವ್ಯಕ್ತಪಡಿಸಿದ್ದು, ಕೆಂಪೇಗೌಡ, ಅಂಬೇಡ್ಕರ್ ಇಬ್ಬರಿಗೂ

» ನಾಲ್ಕನೇ ಪುಟದಲ್ಲಿ

ಪಾನಮತ್ತ ಶಿಕ್ಷಕ-ಆತನ ಹೆಂಡತಿಯಿಂದ ಕಿರುಕುಳ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ನಿತ್ಯ ಕುಡಿದು ಶಾಲೆಗೆ ಬರುವ ಶಿಕ್ಷಕ ವಿನಾಕಾರಣ ಮಕ್ಕಳಿಗೆ ಚಿತ್ರಹಿಂಸೆ ನೀಡುವುದಲ್ಲದೆ ಆತನ ಹೆಂಡತಿಯೂ ಹಲ್ಲೆ ನಡೆಸಿರುವ ಪ್ರಕರಣ ತಾಲ್ಲೂಕಿನ ಸೋರೆಕಾಯಿಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬೆಳಕಿಗೆ ಬಂದಿದೆ.

ಶಿಕ್ಷಕ ಹರೀಶ್ ಹಾಗು ಆತನ ಹೆಂಡತಿ ಪೂರ್ಣಿಮಾ ಮಕ್ಕಳಿಗೆ ಚಿತ್ರಹಿಂಸೆ ನೀಡುತ್ತಿದ್ದಾರೆ. ಸೋಮವಾರ ಬೆಳಿಗ್ಗೆ ಪತಿ ಮದ್ಯದ ಅಮಲಿನಲ್ಲಿ ಕುರ್ಚಿ ಮೇಲೆ ತೇಲಾಡುತ್ತಿದ್ದರೆ ಆತನ ಹೆಂಡತಿ ವಿದ್ಯಾರ್ಥಿನಿಯರನ್ನು ಹಿಡಿದು ಹೊಡೆಯುತ್ತಿದ್ದಳು. ಆತಂಕಗೊಂಡ ಮಕ್ಕಳು ಶಾಲೆ ಬಿಟ್ಟು ಮನೆಗೆ ಓಡಿ ಪೋಷಕರಿಗೆ ತಿಳಿಸಿದ್ದಾರೆ.

ಶಾಲೆ ಎದುರು ಪೋಷಕರು ಜಮಾಯಿಸುತ್ತಿದ್ದಂತೆ ಕ್ಷೇತ್ರ ಶಿಕ್ಷಣಾಧಿಕಾರಿ ದೀಪ, ಬಿಆರ್‌ಸಿ ಅನಿಲ್, ಶಿಕ್ಷಣ ಸಂಯೋಜಕ ಶ್ರೀನಿವಾಸ್ ಹಾಗು ಸಿಆರ್‌ಪಿ ಪುಟ್ಟಸ್ವಾಮಿ ದೌಡಾಯಿಸಿದರು. ಗ್ರಾಮಸ್ಥರು ಶಿಕ್ಷಕ ಹರೀಶ್ ವಿರುದ್ಧ ದೂರಿನ ಸುರಿಮಳೆಗೈದರು. ನಂತರ ವಿದ್ಯಾರ್ಥಿಗಳಿಂದ ಪ್ರತ್ಯೇಕವಾಗಿ ಮಾಹಿತಿ ಪಡೆದುಕೊಂಡರು.

ಶಿಕ್ಷಕನ ಪತ್ನಿ ಪೂರ್ಣಿಮಾ ಆಗಾಗ ಶಾಲೆಗೆ ಬಂದು ಪಠ್ಯಕ್ರಮದ ಕುರಿತು ಕೇಳುತ್ತಾರೆ. ಗೃಹಿಣಿಯಾಗಿರುವ

> **ಗ್ರಾಮಸ್ಥರು, ಪೋಷಕರು ಹಾಗು ವಿದ್ಯಾರ್ಥಿಗಳಿಂದ ಮಾಹಿತಿ ಪಡೆಯಲಾಗಿದೆ. ಶಿಕ್ಷಕನ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಮೇಲಾಧಿಕಾರಿಗಳಿಗೆ ವರದಿ ಸಲ್ಲಿಸಲಾಗುವುದು.**
>
> **-ಹೆಚ್.ಎನ್.ದೀಪ, ಕ್ಷೇತ್ರ ಶಿಕ್ಷಣಾಧಿಕಾರಿ ಚನ್ನರಾಯಪಟ್ಟಣ**

ಆಕೆಗೆ ಶಿಕ್ಷಕಿಯ ಜವಾಬ್ದಾರಿ ಕೊಟ್ಟಿದ್ದು ಯಾರು, ಕಾರಣವಿಲ್ಲದೆ ಕೈ-ಕತ್ತು ಹಿಸುಕುತ್ತಾರೆಂದು ವಿದ್ಯಾರ್ಥಿಗಳು ಅಳಲು ತೋಡಿಕೊಂಡರು.

ಎಸ್‌ಡಿಎಂಸಿ ಅಧ್ಯಕ್ಷ ಶ್ರೀನಿವಾಸ್, ಗ್ರಾಮದ ಚೇತನ್, ವೆಂಕಟೇಶ್ ಅವರು ಮಾತನಾಡಿ, ಮಕ್ಕಳ ದಾಖಲಾತಿ ಕೊರತೆಯಿಂದ ಸರ್ಕಾರಿ ಶಾಲೆಗಳು ಮುಚ್ಚುತ್ತಿರುವ ಪ್ರಸ್ತುತ ದಿನಗಳಲ್ಲಿ ಈ ಶಾಲೆ ಉಳಿಯಬೇಕೆಂದು ಮಕ್ಕಳನ್ನು ಇಲ್ಲಿಗೆ ಸೇರಿಸಿದ್ದೇವೆ. ಈ ಶಿಕ್ಷಕ ಶಾಲೆಗೆ ಕೆಟ್ಟ ಹೆಸರು ತರುತ್ತಿದ್ದಾನೆ. ಮಕ್ಕಳ ಮೇಲೆ ದೌರ್ಜನ್ಯ ನಡೆದರೆ ವಿದ್ಯಾರ್ಥಿಗಳ ಮಾನಸಿಕ ಹಾಗು ಶೈಕ್ಷಣಿಕ ಪ್ರಗತಿ ಮೇಲೆ ಮೇಲೆ ದುಷ್ಪರಿಣಾಮ ಬೀರುತ್ತದೆ. ಶಿಕ್ಷಕ ಹರೀಶ್‌ನನ್ನು ಸೇವೆಯಿಂದ ವಜಾಗೊಳಿಸಬೇಕೆಂದು ಆಗ್ರಹಿಸಿದರು.

ಇದೊಂದೇ ಶಾಲೆಯಲ್ಲ

ಶಿಕ್ಷಕರು ಕರ್ತವ್ಯ ಮರೆತು ವರ್ತಿಸುವ ಪ್ರಕರಣ ಇಲ್ಲಿಗಷ್ಟೇ ಸೀಮಿತವಾಗಿಲ್ಲ, ತಾಲ್ಲೂಕಿನ ಬಹುತೇಕ ಶಾಲೆಗಳಲ್ಲಿ ಇಂತಹದ್ದೇ ಸ್ಥಿತಿ ಇದೆ. ಯಾವುದೂ ಬೆಳಕಿಗೆ ಬಂದಿರುವುದಿಲ್ಲ. ಕೆಲ ಶಾಲೆಗಳಲ್ಲಿ ಅಡುಗೆ ಸಿಬ್ಬಂದಿಯೇ ಮುಖ್ಯ ಶಿಕ್ಷಕರಂತೆ ವರ್ತಿಸುತ್ತಾರೆ. ಮೇಲಾಧಿಕಾರಿಗಳು ತಿಂಗಳಲ್ಲಿ ಎರಡೂರು ಬಾರಿ ಶಾಲೆಗಳಿಗೆ ಭೇಟಿ ನೀಡಿ ಪೋಷಕರ ಸಭೆ ಮಾಡಬೇಕೆಂದು ಗ್ರಾಮಸ್ಥರು ಸಲಹೆ ನೀಡಿದರು.

ಕೃಷಿ ನಷ್ಟ ಪರಿಹಾರ ನೀಡುವುದು ರಾಜ್ಯಗಳ ಜವಾಬ್ದಾರಿ

ತೆಂಗು ಬೆಳೆಗಾರರಿಗೆ ವಿಶೇಷ ಪರಿಹಾರ ನೀಡಲು ಕೇಂದ್ರ ನಕಾರ | ಸಂಸತ್‌ನಲ್ಲಿ ಶ್ರೇಯಸ್ ಪಟೇಲ್ ಪ್ರಶ್ನೆಗೆ ಸಿಗದ ಸ್ಪಂದನೆ

• ಪ್ರಜೋದಯ ವರದಿ

ನವದೆಹಲಿ: ಹಾಸನ ಜಿಲ್ಲೆಯಲ್ಲಿ ಬೆಳೆದಿರುವ ಲಕ್ಷಾಂತರ ಹೆಕ್ಟೇರ್ ತೆಂಗು ಬೆಳೆ ನಾಶವಾಗಿ ತೀವ್ರ ಸಂಕಷ್ಟದಲ್ಲಿರುವ ತೆಂಗು ಬೆಳೆಗಾರರಿಗೆ ಕೇಂದ್ರ ಸರ್ಕಾರ ತಕ್ಷಣ ವಿಶೇಷ ಪರಿಹಾರ ನೀಡಬೇಕೆಂದು ಸಂಸದ ಶ್ರೇಯಸ್ ಪಟೇಲ್ ಅವರು ಲೋಕಸಭೆಯಲ್ಲಿ ಕೇಳಿದ ಪ್ರಶ್ನೆಗೆ ಕೇಂದ್ರ ಸರ್ಕಾರ ನೇರ ಉತ್ತರ ನೀಡಿದ್ದು, ಕೃಷಿ ನಷ್ಟಕ್ಕೆ ಪರಿಹಾರ ನೀಡುವುದು ರಾಜ್ಯಗಳ ಜವಾಬ್ದಾರಿ ಎಂದು ಹೇಳುವ ಮೂಲಕ ಕೈತೊಳೆದು ಕೊಂಡಿದೆ.

ಮಂಗಳವಾರ ಲೋಕಸಭೆಯಲ್ಲಿ ರೈತ ಪರ ದನಿ ಎತ್ತಿದ ಸಂಸದ ಶ್ರೇಯಸ್ ಪಟೇಲ್ ಅವರು ಜಿಲ್ಲೆಯ ಪ್ರಮುಖ ತೆಂಗು ಬೆಳೆಯುವ ಅರಸೀಕೆರೆ, ಚನ್ನರಾಯಪಟ್ಟಣ ಸೇರಿ ಒಟ್ಟು 1.18 ಲಕ್ಷ ಹೆಕ್ಟೇರ್ ಪ್ರದೇಶವು ರುಗೋಸ್ ವೈಟ್‌ಫ್ಲೈ ಮತ್ತು ಇತರೆ ರೋಗಗಳಿಂದ ತೀವ್ರ ಹಾನಿಗೊಳಗಾಗಿದೆ ಎಂಬುದನ್ನು ಸದನದ ಗಮನಕ್ಕೆ ತಂದರು. ಈ ನಷ್ಟದಿಂದ ರೈತರು ಬದುಕು ಕಳೆದು ಕೊಳ್ಳುತ್ತಿದ್ದಾರೆ. ಆದ್ದರಿಂದ, ಕೇಂದ್ರ ಸರ್ಕಾರದಿಂದ ವಿಶೇಷ ಹಣಕಾಸಿನ ನೆರವು

ನೀಡಬೇಕಿದೆ ಎಂದು ಒತ್ತಾಯಿಸಿದರು.

ಸಂಸದರ ಈ ಪ್ರಶ್ನೆಗೆ ಉತ್ತರಿಸಿದ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್, ಕೃಷಿ ಕ್ಷೇತ್ರ ಮತ್ತು ಬೆಳೆ ನಷ್ಟಕ್ಕೆ ಪರಿಹಾರ ನೀಡುವುದು ರಾಜ್ಯ ಸರ್ಕಾರದ ಪ್ರಾಥಮಿಕ ಜವಾಬ್ದಾರಿ ಎಂದು ಸ್ಪಷ್ಟಪಡಿಸಿದರು.

ರಾಜ್ಯ ಸರ್ಕಾರವು ತನ್ನಲ್ಲಿ ಲಭ್ಯವಿರುವ ಎಸ್‌ಡಿಆರ್‌ಎಫ್ (ರಾಜ್ಯ ವಿಪತ್ತು ಪರಿಹಾರ ನಿಧಿ) ಹಣವನ್ನೇ ಬಳಸಿ ಮೊದಲು ರೈತರಿಗೆ ನೆರವಾಗಬೇಕು. ನಷ್ಟ ಅತಿ ದೊಡ್ಡದಾಗಿದ್ದರೆ, ಅದನ್ನು ತೀವ್ರ ಸ್ವರೂಪದ ವಿಪತ್ತು ಎಂದು ಪರಿಗಣಿಸಿ ಎನ್‌ಡಿಆರ್‌ಎಫ್ (ರಾಷ್ಟ್ರೀಯ ವಿಪತ್ತು ನಿಧಿ) ಅಡಿಯಲ್ಲಿ ಸಹಾಯ ಕೋರಿ ರಾಜ್ಯವೇ ಕೇಂದ್ರಕ್ಕೆ ಪ್ರಸ್ತಾವನೆಯನ್ನು ಕಳುಹಿಸಬೇಕು. ಅಂತಹ ಪ್ರಸ್ತಾವನೆ ಬಂದಾಗ ಮಾತ್ರ ಕೇಂದ್ರ ಸರ್ಕಾರವು ಸಹಾಯದ ಬಗ್ಗೆ ನಿರ್ಧಾರ ತೆಗೆದುಕೊಳ್ಳುತ್ತದೆ ಎಂದು ಸಚಿವರು ತಿಳಿಸಿದರು.

ಸಂಸದ ಶ್ರೇಯಸ್ ಪಟೇಲ್ ಅವರ ಪ್ರಯತ್ನದ ನಡುವೆಯೂ, ಕೇಂದ್ರ ಸರ್ಕಾರವು ನೇರವಾಗಿ ವಿಶೇಷ ಪರಿಹಾರ ಘೋಷಣೆ ಮಾಡಲು ನಿರಾಕರಿಸಿದ ಕಾರಣ, ತಕ್ಷಣ ಆರ್ಥಿಕ ನೆರವಿನ ನಿರೀಕ್ಷೆಯಲ್ಲಿದ್ದ ಹಾಸನದ ತೆಂಗು ಬೆಳೆಗಾರರಿಗೆ ಕೇಂದ್ರದ ಈ ಉತ್ತರದಿಂದ ನಿರಾಸೆಯಾಗಿದೆ. ಪರಿಹಾರ ಸಿಗಬೇಕಾದರೆ, ರಾಜ್ಯ ಸರ್ಕಾರವು ತುರ್ತಾಗಿ ಸೂಕ್ತ ಪ್ರಸ್ತಾವನೆ ಕಳುಹಿಸಬೇಕಾದ ಅನಿವಾರ್ಯತೆ ಎದುರಾಗಿದೆ.

ಮೆಕ್ಕೆ ಜೋಳಕ್ಕೆ ಬೆಂಬಲ ಬೆಲೆ ಹೆಚ್ಚಿಸಲು ಮನವಿ

• ಪ್ರಜೋದಯ ವರದಿ

ಹಾಸನ: ಮೆಕ್ಕೆ ಜೋಳ ಬೆಳೆಗೆ ಬೆಂಬಲ ಬೆಲೆ ಹೆಚ್ಚಿಸುವಂತೆ ಒತ್ತಾಯಿಸಿ ಸಂಸದ ಶ್ರೇಯಸ್ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚವ್ಹಾಣ್ ಅವರಲ್ಲಿ ಮನವಿ ಮಾಡಿದರು.

ನವದೆಹಲಿಯ ಸಂಸತ್ ಕಚೇರಿಯಲ್ಲಿ ಸಚಿವರನ್ನು ಭೇಟಿಯಾದ ಶ್ರೇಯಸ್, ಮೆಕ್ಕೆಜೋಳ ಬೆಳೆಗಾರರ ಬೇಡಿಕೆಗಳ ಕುರಿತು ಮಾಹಿತಿ ನೀಡಿ ತಕ್ಷಣವೇ ಪರಿಹಾರ ಕ್ರಮ ಜರುಗಿಸುವಂತೆ ಮನವಿ ಮಾಡಬೇಕು. ಎನ್‌ಎಎಫ್‌ಡಿ/ಎನ್‌ಸಿಸಿಎಫ್ ಮುಖಾಂತರ ಪ್ರತಿ ಕ್ವಿಂಟಾಲ್ ಮೆಕ್ಕೆಜೋಳಕ್ಕೆ 2,639 ರೂ. ದರದಲ್ಲಿ ಖರೀದಿ ಮಾಡಲು ನೀಡಿರುವ ಎಸ್‌ಒಪಿ ಇನ್ನೂ ಜಾರಿಯಾಗಿಲ್ಲ. ಡಿಸ್ಟಿಲರಿಗಳು ಖರೀದಿ ಆದೇಶವಿಲ್ಲದೆ ಪ್ರಕ್ರಿಯೆ ಆರಂಭಿಸದೆ ತೊಂದರೆ ಆಗುತ್ತಿದ್ದು, ಸಚಿವಾಲಯ ಈ ನಿಟ್ಟಿನಲ್ಲಿ ಆದೇಶ ಹೊರಡಿಸಬೇಕೆಂದು ಕೋರಿದರು.

2025-26ರ ಕಬ್ಬಿಗೆ ನ್ಯಾಯ ಸಮ್ಮತ ಮತ್ತು ಪರಿಹಾರ ದರ

(ಎಂಆರ್‌ಪಿ) ಪ್ರತಿ ಟನ್‌ಗೆ 3,550 ರೂ. ಎಂದು ನಿಗದಿಯಾಗಿದ್ದರೂ 800 ರಿಂದ 900 ರೂ. ವರೆಗಿನ ಹೆಚ್ಚಾಯಿಂಡಿ ಟಿ ವೆಚ್ಚಗಳಿಂದ ರೈತರಿಗೆ ದೊರೆಯುವ ನಿಜವಾದ ಆದಾಯ 2,600 ರಿಂದ

ಸಂಪದ ನಗೆಬುಗ್ಗೆ

ತೀರ್ಥಯಾತ್ರೆ

ಸಾಕು ಸುಮ್ಮಿರಿ ಅತ್ತೇ .. ತೀರ್ಥಯಾತ್ರೆಗೆ ಹೋಗಿ ಅಲ್ಲಿ ಸ್ನಾನ ಮಾಡಿದೆ, ಇಲ್ಲಿ ಕುಳಿತೆ, ಅಲ್ಲಿ ಮಲಗಿದೆ ಅಂತ ಹೇಳ್ಕೊಂಡು ಎಷ್ಟೊಂದು ಬೀಗ್ತಿದ್ದೀರಿ, ಸೊಸೆ ತಕರಾರು ಮಾಡಿದಳು.

ಅತ್ತೆ ಬಿಡಲಿಲ್ಲ.. ಬೀಗದೆ ಏನೇ.. ಅಲ್ಲೆಲ್ಲಾ ಹೋಗಿ ಪುಣ್ಯ ಸಂಪಾದನೆ ಮಾಡಿದ್ದು ನಾನು.. ಹೌದಲ್ವಾ ಸಾಕು ಸಾಕು... ನಿಮ್ಮಗ ದಿನಾ ಸಂಜೆ ತೀರ್ಥಯಾತ್ರೆ ಮುಗಿಸಿ ಬಂದಿರ್ತಾರೆ... ಆ ಗಟಾರದಲ್ಲಿ ಬಿದ್ದೆ. ಈ ಮೋರಿಯಿಂದ ಎದ್ದೆ.. ರಸ್ತೆಯ ಉದ್ದಗಲ ಅಳೆದೆ ಅಂತ ಹೇಳ್ಕೊಂಡು ಮೆರೀತಾರಾ ಹೇಳಿ ?!

ಸೊಸೆಯ ಮುಂದೆ ಮತ್ತೆಂದೂ ಯಾತ್ರೆಯ ಸುದ್ದಿ ಅತ್ತೆ ತೆಗೀಲೇ ಇಲ್ಲ!

ಹೃದಯ ಸಮಸ್ಯೆ

ಡಾಕ್ಟೇ... ಇವರಿಗೇನಾಗಿದೆ? ಚಿಂತೆಯ ಎಲ್ಲಾ ಗೆರೆಗಳು ಅವಳ ಮುಖದಲ್ಲಿ ಒಂಥರಾ ರುದ್ರ ನರ್ತನ ಮಾಡುತ್ತಿದ್ದವು!

ಹೃದಯದ ಕಾಯಿಲೆ ಕಣಮ್ಮಾ.. ಬಹಳ ಸಮಯದಿಂದ ಇದ್ದಂತಿದೆಯಲ್ಲಮ್ಮಾ! ಡಾಕ್ಟು ಕರುಣಾಪೂರಿತ ನುಡಿ ನುಡಿದರು. ಓಹ್ ಹೌದಾ? ಈಗ ನೆಮ್ಮದಿ ಆಯ್ತು! ಮದುವೆಯಾಗಿ ಇಷ್ಟು ವರ್ಷಗಳಾದರೂ ಇವರು ಹೃದಯಪೂರ್ವಕವಾಗಿ ನನ್ನ ಇಷ್ಟ ಪಟ್ಟಿಲ್ಲದ ಕಾರಣ ಈಗ ತಿಳೀತು! ಪಾಪ, ಸುಮ್ಮನೇ ಅವರ ಮೇಲೆ ರೇಗುತ್ತಿದ್ದೆ, ಡಾಕ್ಟರ್ ಕಡೆಯಿಂದ ನೋಟ ಗಂಡನ ಕಡೆ ತಿರುಗಿಸಿ ಅಂದಳು, ಕ್ಷಮಿಸಿ ರೀ... ಇನ್ನೇಲೆ ರೇಗಲ್ಲ ಕಣೋ !

ಖರ್ಚು

ಶ್ರೀಮತಿ: ನೀವು ಕುಡಿಯುವುದಕ್ಕಾಗಿ ತುಂಬಾ ಖರ್ಚು ಮಾಡುತ್ತೀರಿ, ದಯವಿಟ್ಟು ನಿಲ್ಲಿಸಿ,

ಸೂರಿ: ನೀನು ತಿಂಗಳಿಗೆ ಐವತ್ತು ಸಾವಿರ ರೂಪಾಯಿಯನ್ನು ಬ್ಯೂಟಿ ವಾರ್ಲರ್‌ಗೆ ಖರ್ಚು ಮಾಡಲ್ಲವೇ?

ಶ್ರೀಮತಿ: ಅಯ್ಯೋ, ಅದೆಲ್ಲವೂ ನಿಮಗಾಗಿಯೇ... ನಾನು ಸುಂದರವಾಗಿ ಕಾಣಿಸಿಕೊಂಡು ನಿಮ್ಮನ್ನು ಸಂತೋಷ-ಪಡಿಸಲು ಪಾರ್ಲರ್‌ಗೆ ಹೋಗುತ್ತಿರುವೆ.

ಸೂರಿ: ಅಯ್ಯೋ ಹುಚ್ಚಿ, ನೀನು ಸುಂದರವಾಗಿ ಕಾಣಬೇಕೆಂದೇ ನಾನು ಕುಡಿತಕ್ಕಾಗಿ ಅಷ್ಟೊಂದು ಹಣ ಖರ್ಚು ಮಾಡುತ್ತೇನೆ.

ತಂಗಿ

ಶ್ರೀಮತಿ: ಫೋನಿನಲ್ಲಿ ತುಂಬಾ ಕೆಳದನಿಯಲ್ಲಿ ಯಾರೊಂದಿಗೆ ಮಾತನಾಡುತ್ತಿದ್ದೀರಿ?

ಸೂರಿ: ತಂಗಿಯೊಂದಿಗೆ

ಶ್ರೀಮತಿ: ಅವಳೊಂದಿಗೆ ಅಷ್ಟೊಂದು ಮೆಲುದನಿಯಲ್ಲಿ ಮಾತನಾಡುವ ಅವಶ್ಯಕತೆ ಏನಿದೆ?

ಸೂರಿ: ಏಕೆಂದರೆ ಮಾತಾಡುತ್ತಿರುವುದು ನನ್ನ ತಂಗಿಯಲ್ಲ, ನಿನ್ನ ತಂಗಿ,

★★★★★

ಸೂರಿ: ನೆರೆಮನೆಯವನ ಹೆಂಡತಿ ತವರಿಗೆ ಹೋಗಿ, ವಾಪಸ್ ಬಂದಿಲ್ಲ, ಈ ಬಗ್ಗೆ ದೂರು ತೆಗೆದುಕೊಳ್ಳಿ ಸರ್.

ಪೋಲೀಸ್: ನೆರೆಮನೆಯವನ ಹೆಂಡತಿ ತವರಿಗೆ ಹೋಗಿ, ವಾಪಸ್ ಬರದಿದ್ದರೆ ನಿನಗೇನು? ನೀನ್ಯಾಕೆ ದೂರು ಕೊಡಲು ಬಂದಿರುವೆ?

ಸೂರಿ: ಆಕೆ ತವರು ಸೇರಿದ ಮೇಲೆ ನೆರೆಮನೆಯವನು ಪಾರ್ಟಿಯ ಮೇಲೆ ಪಾರ್ಟಿ ಮಾಡುತ್ತಿದ್ದಾನೆ. ಸಂತೋಷದಿಂದಿದ್ದಾನೆ. ಅದನ್ನು ಕಂಡು ನನ್ನ ಹೊಟ್ಟೆ ಉರಿಯುತ್ತಿದೆ. ಅದಕ್ಕೇ ದೂರು ಕೊಡಲು ಬಂದಿರುವೆ. ದಯವಿಟ್ಟು ಆಕೆಯನ್ನು ಕರೆಸಿ ಸರ್!

★★★★★

ಮಗ: ಅಪ್ಪ ಕುಡುಕ ಎಂದರೆ ಯಾರು?

ತಂದೆ: ನೋಡು ಪುಟ್ಟ, ಎದುರಿಗೆ ನಾಲ್ಕು ಕಾರುಗಳು ನಿಂತಿವೆಯಲ್ಲ ಅವು ಯಾರಿಗೆ ಎಂಟಾಗಿ ಕಾಣುತ್ತವೆಯೋ ಅವನೇ ಕುಡುಕ.

ಮಗ: ಅಪ್ಪ ಅಲ್ಲಿ ಎರಡೇ ಕಾರು ನಿಂತಿವೆಯಲ್ಲಾ!

10-12-2025 ದಿನ ಭವಿಷ್ಯ

ಮೇಷ: ವಿಶ್ರಾಂತಿ ಪ್ರಮುಖವಾದ ಒಂದು ದಿನ ಇತ್ತೀಚೆಗೆ ನೀವು ಬಹಳಷ್ಟು ಮಾನಸಿಕ ಒತ್ತಡ ಎದುರಿಸುತ್ತಿದ್ದೀರಿ - ಮನೋಲ್ಲಾಸ ಮತ್ತು ಮನೋರಂಜನೆ ನಿಮಗೆ ವಿಶ್ರಾಂತಿ ಪಡೆಯಲು ಸಹಾಯ ಮಾಡುತ್ತದೆ. ಯಾರಿಂದಲೂ ಸಲಹೆಯನ್ನು ತೆಗದುಕೊಳ್ಳದೆ ನೀವು ಹಣವನ್ನು ಎಲ್ಲಿಯೂ ಹೂಡಿಕೆ ಮಾಡಬಾರದು. ಹಳೆಯ ಸಂಪರ್ಕಗಳು ಮತ್ತು ಸಂಬಂಧಗಳ ಪುನಶ್ಚೇತನಕ್ಕೆ ಒಳ್ಳೆಯ ದಿನ.

ವೃಷಭ: ಆರೋಗ್ಯವು ಇತರರೊಂದಿಗೆ ಸಂತೋಷವನ್ನು ಹಂಚಿಕೊಳ್ಳುವ ಮೂಲಕ ಅರಳುತ್ತದೆ. ಹಣವನ್ನು ಯೋಚಿಸದೆ ಮತ್ತು ಪರಿಗಣಿಸದೆ ಖರ್ಚುಮಾಡುವುದು, ನಿಮಗೆ ಎಷ್ಟು ನಷ್ಟ ಮಾಡಬಹುದು ಎಂಬುದು ಇಂದು ನಿಮಗೆ ಅರ್ಥವಾಗಬಹುದು. ನಿಮ್ಮಲ್ಲಿ ಕೆಲವು ಆಭರಣ ಅಥವಾ ಗೃಹಬಳಕೆಯ ಸಾಧನಗಳನ್ನು ಖರೀದಿಸುವ ಸಾಧ್ಯತೆಗಳಿವೆ.

ಮಿಥುನ: ನಿಮ್ಮ ದೈಹಿಕ ಬಲವನ್ನು ನಿರ್ವಹಿಸಲು ನೀವು ಕ್ರೀಡೆಯಲ್ಲಿ ಸಮಯ ಕಳೆಯುವ ಸಾಧ್ಯತೆಗಳಿವೆ. ಪೂರ್ತಿ ದಿನ ನೀವು ಹಣದ ಬಗ್ಗೆ ಹೋರಾಟ ಮಾಡುತ್ತಿದ್ದೀರಿ, ಆದರೆ ಸಂಜೆಯ ಸಮಯದಲ್ಲಿ ನೀವು ಹಣದ ಲಾಭವನ್ನು ಪಡೆಯಬಹುದು. ನೀವು ನಿಮ್ಮ ದೈನಂದಿನ ಕಾರ್ಯಕ್ರಮಗಳಿಂದ ಬಿಡುವು ಮಾಡಿಕೊಂಡು ನಿಮ್ಮ ಸ್ನೇಹಿತರೊಂದಿಗೆ ಇಂದು ಹೊರಗೆ ಹೋಗಬೇಕು.

ಕರ್ಕಾಟಕ: ಮನರಂಜನೆ ಮತ್ತು ಮೋಜಿನ ಒಂದು ದಿನ. ಇಂದು ನೀವು ನಿಮ್ಮ ಮನೆಯ ಹಿರಿಯ ಜನರಿಂದ ಹಣವನ್ನು ಉಳಿಸುವ ಬಗ್ಗೆ ಯಾವುದೇ ಸಲಹೆಯನ್ನು ತೆಗದುಕೊಳ್ಳಬಹುದು ಮತ್ತು ಆ ಸಲಹೆಗೆ ಜೀವನದಲ್ಲಿ ಸ್ಥಾನವನ್ನು ಸಹ ನೀಡಬಹುದು ಕುಟುಂಬ ಸದಸ್ಯರಿಗೆ ಸಹಾಯ ಮಾಡಲು ಮುಕ್ತ ಸಮಯದ ಲಾಭ ತೆಗೆದುಕೊಳ್ಳಿ.

ಸಿಂಹ: ವಿಶ್ರಾಂತಿಯ ಸಲುವಾಗಿ ನಿಕಟ ಸ್ನೇಹಿತರೊಂದಿಗೆ ಸ್ವಲ್ಪ ಸಮಯ ಕಳೆಯಿರಿ. ನೀವು ಜೀವನದಲ್ಲಿ ಹಣದ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳುವುದಿಲ್ಲ ಆದರೆ ಇಂದು ನೀವು ಹಣದ ಮೌಲ್ಯವನ್ನು ಅರ್ಥಮಾಡಿಕೊಳ್ಳಬಹುದು ಏಕೆಂದರೆ ಇಂದು ನಿಮಗೆ ಹಣದ ಅಗತ್ಯವಿರುತ್ತದೆ ಆದರೆ ನಿಮ್ಮ ಸಾಕಷ್ಟು ಹಣ ಇರುವುದಿಲ್ಲ.

ಕನ್ಯಾ: ಇಂದು ಹಿಂದಿನ ಕೆಟ್ಟ ನಿರ್ಧಾರಗಳು ಹತಾಶೆ ಮತ್ತು ಮಾನಸಿಕ ಪ್ರಕ್ಷುಬ್ಧತೆಗೆ ಕಾರಣವಾಗುತ್ತದೆ -ನೀವು ಮುಂದೇನು ಮಾಡಬೇಕೆಂದು ನಿರ್ಧರಿಸಲಾಗದೇ ಸಲುಕಿಕೊಂಡಿರಬಹುದು. ಇತರರಿಂದ ಸಹಾಯ ಪಡೆಯಿರಿ ಇದು ಮತ್ತೊಂದು ಚೈತನ್ಯದಾಯಕ ದಿನವಾಗಿರುತ್ತದೆ ಮತ್ತು ಅನಿರೀಕ್ಷಿತ ಲಾಭಗಳನ್ನು ನಿರೀಕ್ಷಿಸಬಹುದು.

ತುಲಾ: ನಿಮ್ಮ ಆರೋಗ್ಯದ ಬಗ್ಗೆ ವಿಶೇಷವಾಗಿ ರಕ್ತದೊತ್ತಡ ರೋಗಿಗಳ ಬಗ್ಗೆ ಸ್ವಲ್ಪ ಜಾಗ್ರತೆಯಿಂದಿರಿ. ಲೋನ್ ತೆಗೆದುಕೊಂಡಿರುವ ಜನರಿಗೆ ಲೋನ್‌ನ ಮೊತ್ತವನ್ನು ಮರುಪಾವತಿಸುವಲ್ಲಿ ತೊಂದರೆಗಳು ಉಂಟಾಗಬಹುದು. ನಿಮ್ಮ ಪ್ರೇಮ ಸಂಗಾತಿ ನಿಜಕ್ಕೂ ಇಂದು ಅದ್ಭುತವಾದದ್ದನ್ನು ಏನೋ ತರುತ್ತಾರೆ.

ವೃಶ್ಚಿಕ: ನಗು ನಿಮ್ಮ ಎಲ್ಲ ಸಮಸ್ಯೆಗಳಿಗೆ ಪರಿಹಾರವಾದ್ದರಿಂದ ನಕ್ಕುಬಿಡಿ. ನೀವು ಜೀವನದಲ್ಲಿ ಹಣದ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳುವುದಿಲ್ಲ ಆದರೆ ಇಂದು ನೀವು ಹಣದ ಮೌಲ್ಯವನ್ನು ಅರ್ಥಮಾಡಿಕೊಳ್ಳಬಹುದು ಏಕೆಂದರೆ ಇಂದು ನಿಮಗೆ ಹಣದ ಅಗತ್ಯವಿರುತ್ತದೆ ಆದರೆ ನಿಮ್ಮ ಸಾಕಷ್ಟು ಹಣ ಇರುವುದಿಲ್ಲ. ನೀವು ಶಕ್ತಿಶಾಲಿ ಸ್ಥಳಗಳಲ್ಲಿರುವವರ ಜೊತೆ ಒಡನಾಡುವ ಅಗತ್ಯವಿದೆ.

ಧನು: ನಿಮ್ಮ ಭಾವನೆಗಳನ್ನು ನಿಯಂತ್ರಿಸಲು ನಿಮಗೆ ಕಷ್ಟವಾಗಬಹುದು - ನಿಮ್ಮ ಅಸಾಮಾನ್ಯ ವರ್ತನೆ ನಿಮ್ಮ ಸುತ್ತಲಿನ ಜನರನ್ನು ಗೊಂದಲದಲ್ಲಿ ಕೆಡವಬಹುದು ಮತ್ತು ನಿಮ್ಮನ್ನು ನಿರಾಸೆಗೊಳಿಸಬಹುದು. ಯಾವುದೇ ವ್ಯಕ್ತಿಯ ಸಹಾಯವಿಲ್ಲದೆ ನೀವು ಹಣವನ್ನು ಗಳಿಸಲು ಸಾಧ್ಯವಾಗುತ್ತದೆ. ನೀವು ನಿಮ್ಮ ಮೇಲೆ ನಂಬಿಕೆಯನ್ನಿಡುವ ಅಗತ್ಯವಿದೆ.

ಮಕರ: ನಗು ನಿಮ್ಮ ಎಲ್ಲ ಸಮಸ್ಯೆಗಳಿಗೆ ಪರಿಹಾರವಾದ್ದರಿಂದ ನಕ್ಕುಬಿಡಿ. ಯಶಸ್ಸಿಗೆ ಇಂದಿನ ಸೂತ್ರವೆಂದರೆ ನಾವೀನ್ಯತೆಯಿರವ ಮತ್ತು ಉತ್ತಮ ಅನುಭವ ಹೊಂದಿರುವ ಜನರ ಸಲಹೆಯಂತೆ ನಿಮ್ಮ ಹಣವನ್ನು ಹೂಡುವುದಾಗಿದೆ. ನಿಮ್ಮ ಸಂತೋಷವನ್ನು ನಿಮ್ಮ ಪೋಷಕರ ಜೊತೆ ಹಂಚಿಕೊಳ್ಳಿ. ಈ ದಿನ ಒಂದು ಸುಂದರ ಸಂದೇಶದೊಂದಿಗೆ ಆನಂದ ಮತ್ತು ಸಂತೋಷದಿಂದ ತುಂಬಿದೆ.

ಕುಂಭ: ಮದ್ಯಪಾನ ಮಾಡಿದಲ್ಲಿ ಅದು ನಿಮ್ಮ ನಿದ್ರೆಗೆ ಭಂಗ ತಂದು ಆಳವಾದ ವಿಶ್ರಾಂತಿ ತೆಗೆದುಕೊಳ್ಳುವುದನ್ನು ತಡೆಗಟ್ಟಬಹುದಾದ್ದರಿಂದ ಹಾಗೆ ಮಾಡಬೇಡಿ. ಇಂದು ನೀವು ಹಣಕ್ಕೆ ಸಂಬಂಧಿಸಿದ ಸಮಸ್ಯೆಯನ್ನು ಹೊಂದಿರಬಹುದು. ಇದನ್ನು ಪರಿಹರಿಸುವುದಕ್ಕಾಗಿ ನೀವು ನಿಮ್ಮ ತಂದೆ ಅಥವಾ ತಂದೆಗೆ ಸಮಾನವಾದಂತಹ ಯಾವುದೇ ವೈಯ್ಯಕ್ತಿಯಿಂದ ಸಲಹೆಯನ್ನು ತೆಗೆದುಕೊಳ್ಳಬಹುದು.

ಮೀನ: ಖಿನ್ನತೆಯನ್ನು ಹೊಡೆದೋಡಿಸಿ ಇದು ನಿಮ್ಮನ್ನು ಆವರಿಸಿಕೊಳ್ಳುತ್ತಿದೆ ಮತ್ತು ನಿಮ್ಮ ಪ್ರಗತಿಗೆ ಅಡ್ಡಿಪಡಿಸುತ್ತಿದೆ. ಇಂದು ನೀವು ಸುಲಭವಾಗಿ ಬಂಡವಾಳ ಪಡೆಯಬಹುದು ಬಾಕಿಯಿರುವ ಸಾಲಗಳನ್ನು ಸಂಗ್ರಹಿಸಬಹುದು ಅಥವಾ ಹೊಸ ಯೋಜನೆಗಳಿಗೆ ಕೆಲಸ ಮಾಡಲು ಹಣ ಕೇಳಬಹುದು. ಆರೋಗ್ಯ ಚೆನ್ನಾಗಿಲ್ಲದ ಒಬ್ಬ ಸಂಬಂಧಿಯನ್ನು ಭೇಟಿ ಮಾಡಿ.

ಒಮ್ಮೆ ಹಚ್ಚಿಕೊಂಡರೆ

» ಎರಡು ದಿನದ ವಸ್ತಿಯ ನಂತರ ಮನೆಗೆ ತಲುಪುವವರೆಗೂ ಮನಸ್ಸು ನಿಯಂತ್ರಣದಲ್ಲಿರಲಿಲ್ಲ. ಯಾವ ಗಿಡಗಳು ಹೋದವು? ಆಕೆಯಂತೂ ಎಲ್ಲವೂ ಅಂದಳು, ಕೆಲವಾದರೂ ಉಳಿಯಬಾರದೇ ಎಂದು ಮನಸ್ಸು ಪ್ರಾರ್ಥಿಸುತ್ತಿತ್ತು. ಅಂದು ಮನೆಯ ತಲುಪುವ ಹಾದಿಗುಂಟ ಬರುವಾಗ ನೋಡಿದರೆ ಎಲ್ಲವೂ ಬಟಾ ಬಯಲು, ಎರಡೂ ಕಡೆ ಎಲ್ಲ ಗಿಡಗಳನ್ನು ಕಿತ್ತಿದ್ದಾರೆ. ಇನ್ನು ನಮ್ಮದೇನು ಎನ್ನುತ್ತಾ ನಮ್ಮ ಮನೆಯ ಮುಂದೆ ಬಂದಾಗ ಎಲ್ಲ ಗಿಡಗಳು ಹೋಗಿ ಕೇವಲ ಎರಡು ಗಿಡ ಉಳಿದಿದ್ದವು.

ಆದಿನ ಪ್ರಯಾಣ ಮಾಡುವುದು ನಿಶ್ಚಯವಾಗಿತ್ತು. ಈ ಮೊದಲು ಇದೇ ಪ್ರಯಾಣಕ್ಕೆ ಹೋಗಲು ನಿಶ್ಚಯಿಸಿ ಮೂರು ಬಾರಿ ಹಲವು ಕಾರಣಗಳಿಂದ ತಪ್ಪಿದ ಬಳಿಕ ಇದು ಕೊನೆಯ ನಿಶ್ಚಯ ಎನ್ನುವಂತೆ ಹೋಗುವುದು ನಿರ್ಧರಿಸಲಾಗಿತ್ತು. ಯಾವುದೇ ಕಾರಣಕ್ಕೂ ಮುಂದೂಡಲು ಬಾರದ ಪರಿಸ್ಥಿತಿ ಅದು. ಮನೆ ಎದುರು ರಸ್ತೆಯಲ್ಲಿ ಹಲವು ಗಿಡಗಳನ್ನು ಸರಕಾರಿ ಜಾಗದಲ್ಲೇ ಹಚ್ಚಿದ್ದೆವು. ಮೇಲಿನ ಅಂತಸ್ತಿನ ಮನೆಯನ್ನು ಕಟ್ಟಿದ ನಂತರ ಸಿಮೆಂಟ್ ಬಿದ್ದಿದ್ದರಿಂದಲೋ ಏನೋ ಗಿಡಗಳು ಮನೆಯ ಅಂಗಳದಲ್ಲಿ ಅಷ್ಟೊಂದು ಹತ್ತುತ್ತಿರಲಿಲ್ಲ ಮತ್ತು ತೆಂಗಿನ ಗಿಡದ ನೆರಳು ಸಣ್ಣ ಗಿಡಗಳ ಮೇಲೆ ಬಿದ್ದು ಅವುಗಳ ಬೆಳವಣಿಗೆ ಆಗುತ್ತಿರಲಿಲ್ಲ. ಹೀಗಾಗಿ ದೊಡ್ಡ ಮತ್ತು ಕೆಲವು ಚಿಕ್ಕ ಹೂವಿನ ಗಿಡಗಳನ್ನು ಮನೆಯ ಹೊರಗೆ ರಸ್ತೆಯಲ್ಲಿಯೇ ಹಚ್ಚಿ ಆನಂದಿಸಿದ್ದೆವು.

ಕಾರ್ಪೊರೇಷನ್ ಇಂಥ ಗಿಡಗಳನ್ನೆಲ್ಲ ತೆಗೆದು ನೆಲವನ್ನು ಅಗೆದು, ಚಿಕ್ಕ ಕಲ್ಲು ಹಾಕಿ ಅದರ ಮೇಲೆ ಸಿಮೆಂಟ್ ಟೈಲ್ಸ್ ಹಾಕುವ ಕೆಲಸದಲ್ಲಿತ್ತು. ಈ ಕಾರ್ಯ ಈಗಾಗಲೇ ಇತರ ರಸ್ತೆಗಳಲ್ಲಿ ಮಾಡಲಾಗಿತ್ತು. ನಮ್ಮ ಮನೆಯ ರಸ್ತೆಗೂ ವಿಸ್ತರಿಸುವುದು ಎಂದು ಗೊತ್ತಿತ್ತು. ಪ್ರಯಾಣಕ್ಕೆ ಹೋಗುವ ಹಿಂದಿನ ದಿನ ಜೆಸಿಬಿ ಗಾಡಿಯವರಿಗೆ ಮತ್ತು ರಸ್ತೆಯ ಕಾಮಗಾರಿಯ ಉಸ್ತುವಾರಿ ತೆಗೆದುಕೊಂಡ ವ್ಯಕ್ತಿಗೆ ಕರೆದು ಈ ಮೂರು ಗಿಡಗಳು ಗಿಡಗಳನ್ನು ತೆಗೆಯುವುದಾದರೆ ತೆಗೆಯಿರಿ ಆದರೆ ಈ ಮೂರನ್ನು ಮುಟ್ಟಬೇಡಿ. ಬಹಳ ಕಷ್ಟಪಟ್ಟು ಈ ಗಿಡಗಳನ್ನು ಹಚ್ಚಿದ್ದೇನೆ ಎಂದು ಅವರಿಗೆ ಹೇಳಿದೆವು. ಅವರು ಆಯ್ತು ಎಂದು ಗೋಣು ಹಾಕಿದ್ದರು. ಇದರ ಜೊತೆಗೆ ಬಾಜು ಮನೆಯವರಿಗೆ, ಎದುರಿನ ಮನೆಯವರಿಗೂ ತೆಗೆಯದ ಹಾಗೆ ಸ್ವಲ್ಪ ನಿಗಾವಹಿಸಿ ಎಂದು ಗೋಗರೆದಿದ್ದೆವು. ''ಆಯ್ತು'' ಎಂದು ಗೋಣಲ್ಲಾಡಿಸಿದ್ದರು. ಒಬ್ಬರಂತೂ ''ಅಲ್ಲ ನಾಳೆ ಯಾಕೆ ಪ್ರಯಾಣ ಹೋಗಬೇಕು? ಒಂದು ದಿನ ಮುಂದೂಡಿ, ನಾಡಿದ್ದು ಹೋಗಿ'' ಎಂದರು. ಅವರಿಗೆ ನಮ್ಮ ಪ್ರಯಾಣದ ಕಷ್ಟವನ್ನು ಹೇಳಲು ಅಥವಾ ಅರ್ಥೈಸಲು ಆಗಲಿಲ್ಲ. ಅವರಿಗೇನು ಗೊತ್ತು? ನಾವು ಎಷ್ಟು ಬಾರಿ ಈ ಪ್ರಯಾಣವನ್ನು ಮುಂದೂಡಿದ್ದೆವೆಂದು!! ಮೇಲಾಗಿ ರಸ್ತೆಯ ಕಾಮಗಾರಿಯವರು ಒಂದು ದಿನ ಬಿಟ್ಟು ಒಂದು ದಿನ ಬರುವುದು. ಇಲ್ಲಾ ವಾರಗಟ್ಟಲೆ ಕೆಲಸವನ್ನು ಮಾಡುತ್ತಿರಲಿಲ್ಲ. ಹೀಗಾಗಿ ನಾವು ಪ್ರಯಾಣ ಮುಗಿಸಿ ಬಂದರೂ ಇವರು ಬರಲಿಕ್ಕಿಲ್ಲ ಎಂಬ ಯಾವುದೋ ಮೂಲೆಯ ಆತ್ಮವಿಶ್ವಾಸವೆಂದು ನಮಗೆ ಬಲ ಕೊಟ್ಟಿತ್ತು.

ಈ ಮೊದಲು ನಮ್ಮ ರಸ್ತೆಯ ಕಡೆಗೆನೇ ಇವರು ಕೆಲಸ ಪ್ರಾರಂಭಿಸುತ್ತಾರೆಂದು ಅನುಮಾನಿಸಿ ಒಂದು ಸಲ ಪ್ರಯಾಣ ಮುಂದೂಡಿದ್ದೆವು. ಆಗ ಅವರು ಬರಲೇ ಇಲ್ಲ, ಅದಕ್ಕೆ ಇವರು ಬರಲಿಕ್ಕಿಲ್ಲವೆಂದು ತಿಳಿದು ನಿರ್ಧರಿಸಿದ್ದೆವು. ಮೇಲಾಗಿ ಮನೆಯಲ್ಲಿ ಅವ್ವ ಮತ್ತು ಅತ್ತಿಗೆಯನ್ನು ಬಿಟ್ಟು ಎಲ್ಲರೂ ಕೆಲಸಕ್ಕೆ ಹೋಗುವವರೇ. ಎಲ್ಲರೂ ತಮ್ಮ ಆಫೀಸ್‌ಗಳಲ್ಲಿ ಹೇಳಿ ಲೀವ್ ಸ್ಯಾಂಕ್ಷನ್ ಮಾಡಿಕೊಂಡಿದ್ದರು. ಇದು ಕೂಡ ಹಲವು ಬಾರಿಯಾಗಿತ್ತು ಲಿವ್ ಸ್ಯಾಂಕ್ಷನ್ ಆದ ನಂತರ ಪ್ರಯಾಣ ಮುಂದೂಡುವಿಕೆಯಿಂದ ಮತ್ತೆ ಆಫೀಸಿಗೆ ಹಾಜರಾಗಿ ಆಶ್ಚರ್ಯವನ್ನುಂಟು ಮಾಡಿದ್ದೆವು. ಒಂದು ರೀತಿ ತೋಳಬಂತು ತೋಳ ಪರಿಸ್ಥಿತಿ ನಮ್ಮದು. ಈಗ ತಪ್ಪಿಸುವ ಮಾತೇ ಇರಲಿಲ್ಲ, ಇವನ್ನೆಲ್ಲ ನೆರೆಮನೆಯವರಿಗೆ ಹೇಗೆ ಹೇಳುವುದು. ಹಾಗೆ ಸುಮ್ಮನಾಗಿದೆವು.

ಹುಃ. ಹೀಗೆ ಎಲ್ಲಾ ಅಡಚಣೆಗಳ ಮಧ್ಯೆ ಮತ್ತು ತಲೆನೋವುಗಳ ಮಧ್ಯೆ ಪ್ರಯಾಣ ಬೆಳೆಯಿತು. ಹೋದ ಸ್ಥಳ ಕಾಡು, ಮೇಡು, ನದಿ, ಬೆಟ್ಟ, ಆಟಗಳ ಮಿಶ್ರಣ. ಸುಖದ ಪ್ರವಾಸ ಅದು. ಎಲ್ಲವನ್ನು ತೊರೆದು, ಮರೆತು ಅನುಭವಿಸುವಂಥ ತಾಣ. ಆದರೆ ನಾವೆಲ್ಲ ಆನಂದಿಸುವ ಮಧ್ಯಮಧ್ಯದಲ್ಲಿಯೇ ಹಲವು ಸಲ ಅಯ್ಯೋ ನಮ್ಮ ಗಿಡಗಳು ಏನಾದವು ಎನ್ನುವ ಚಿಂತೆ. ಅದೇ ರಾತ್ರಿ ಒಬ್ಬ ನೆರೆ ಮನೆಯವರಿಗೆ ಫೋನ್ ಮಾಡಿದಾಗ ''ಹೌದು ಇವತ್ತು ಕೆಲಸಗಾರರು ಬಂದಿದ್ದರು. ಎಲ್ಲಾ ಗಿಡಗಳು ಹೋದವು'' ಅಂದರು. ಎದೆ ಒಮ್ಮೆಗೇ ಧಸಕ್ ಅಂತು. ಎಷ್ಟು ಪ್ರಯತ್ನ ಪಟ್ಟರೂ ಗಿಡಗಳು ಉಳಿಯಲಿಲ್ಲವೆಂದು ಮನಸ್ಸು ಭಾರವಾಯಿತು. ಇನ್ನೊಂದು ದಿನವನ್ನು ಹೇಗೋ ಕಳೆದು ಪ್ರಯಾಣಿಸುವಾಗ ಮನಸ್ಸೆಲ್ಲ ಗಿಡಗಳ ಮೇಲೆ ಇತ್ತು. ಕೆಲವು ಗಿಡಗಳನ್ನು ಬೇರೆಯವರಿಂದ ಕೇಳಿ ಬೇಡಿ ತೆಗೆದುಕೊಂಡು ಬಂದು ಹಚ್ಚಿದ್ದೆವು. ಅವುಗಳನ್ನು ಬೆಳೆಸುವವರೆಗೂ ತುಂಬಾ ನಿಗಾವಹಿಸಿದ್ದೆವು. ಹೂಗಳ ಗಿಡಗಳು ತುಂಬಾ ಚೆಂದವೇ ಇದ್ದು, ಜನ ದೇವರ ಪೂಜೆಗೆ ಅದರ ಹೂಗಳನ್ನು ಒಯ್ಯುತ್ತಿದ್ದರು. ಒಮ್ಮೆಯೂ ಯಾರಿಗೂ ಕೀಳಬೇಡಿ ಎನ್ನಲಿಲ್ಲ, ಗಿಡ ಹಚ್ಚಿದ್ದೇ ರಸ್ತೆಯ ಜಾಗದಲ್ಲಿ ಎಂದಾಗ ಜನ ಕೀಳುವವರೇ!! ಕಿತ್ತು ದೇವರಿಗೆ ಏರಿಸಲು ಒಯ್ಯುತ್ತಾರಲ್ಲ, ಕೀಳಲಿ, ಏರಿಸಲಿ. ಗಿಡ ಹಚ್ಚಿ, ಹೂ ಕೊಟ್ಟ ಪುಣ್ಯವಾದರೂ ಧಕ್ಕೇ ಧಕ್ಕುತ್ತದೆಂದು ಮನೆಯಲ್ಲಿಯ ಯಾರೂ ಯಾವುದೇ ವ್ಯಕ್ತಿಗೆ ಹೂ ಕೀಳಬೇಡಿ ಎನ್ನುತ್ತಿರಲಿಲ್ಲ. ಪರಿಚಿತ ಅಪರಿಚಿತರ ಎಲ್ಲರೂ ಹೂ ಒಯ್ಯುವವರೇ !!!

ಎರಡು ದಿನದ ವಸ್ತಿಯ ನಂತರ ಮನೆಗೆ ತಲುಪುವವರೆಗೂ ಮನಸ್ಸು ನಿಯಂತ್ರಣದಲ್ಲಿರಲಿಲ್ಲ. ಯಾವ ಗಿಡಗಳು ಹೋದವು? ಆಕೆಯಂತೂ ಎಲ್ಲವೂ ಅಂದಳು, ಕೆಲವಾದರೂ ಉಳಿಯಬಾರದೇ ಎಂದು ಮನಸ್ಸು ಪ್ರಾರ್ಥಿಸುತ್ತಿತ್ತು. ಅಂದು ಮನೆಯ ತಲುಪುವ ಹಾದಿಗುಂಟ ಬರುವಾಗ ನೋಡಿದರೆ ಎಲ್ಲವೂ ಬಟಾ ಬಯಲು, ಎರಡೂ ಕಡೆ ಎಲ್ಲ ಗಿಡಗಳನ್ನು ಕಿತ್ತಿದ್ದಾರೆ. ಇನ್ನು ನಮ್ಮದೇನು ಎನ್ನುತ್ತಾ ನಮ್ಮ ಮನೆಯ ಮುಂದೆ ಬಂದಾಗ ಎಲ್ಲ ಗಿಡಗಳು ಹೋಗಿ ಕೇವಲ ಎರಡು ಗಿಡ ಉಳಿದಿದ್ದವು. ಒಂದು ಮೆಹಂದಿ ಗಿಡ ಮತ್ತೊಂದು ಕಣಗಿಲೆ ಗಿಡ. ಮೆಹಂದಿ ಗಿಡವನ್ನು ಅಕ್ಕ ತನ್ನ ಶಾಲೆಯ ಹತ್ತಿರವಿದ್ದ ಮನೆಯವರಿಂದ ತಂದಿದ್ದರೆ, ಕಣಗಿಲೆ ಗಿಡವನ್ನು ನಾನು ಅಯ್ಯಪ್ಪ ಗುಡಿಯ ಸ್ವಾಮಿಯಿಂದ ಕೇ

ಪೋಕ್ಸೊ-ಬಾಲಗರ್ಭಿಣಿ ಪ್ರಕರಣಗಳ ತಡೆಗಟ್ಟಿ

ಅಗತ್ಯ ಕ್ರಮ ಕೈಗೊಂಡು ಕ್ರಿಯಾ ಯೋಜನೆ ತಯಾರಿಸಲು ಜಿಲ್ಲಾಧಿಕಾರಿ ಲತಾಕುಮಾರಿ ಅಧಿಕಾರಿಗಳಿಗೆ ಸೂಚನೆ

• ಪ್ರಜೋದಯ ವರದಿ

ಹಾಸನ: ಜಿಲ್ಲೆಯಲ್ಲಿ ಪೋಕ್ಸೊ ಹಾಗೂ ಬಾಲಗರ್ಭಿಣಿಯರ ಪ್ರಕರಣಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಕ್ರಿಯಾ ಯೋಜನೆ ತಯಾರಿಸುವಂತೆ ಜಿಲ್ಲಾಧಿಕಾರಿ ಲತಾಕುಮಾರಿ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಪೋಕ್ಸೊ ಹಾಗೂ ಬಾಲ ಗರ್ಭಿಣಿಯರು ಹಾಗೂ ಮಕ್ಕಳ ಸುರಕ್ಷತೆ ಕುರಿತು ನಡೆದ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು ಸಮಾಜದಲ್ಲಿ ಹೆಣ್ಣು ಮಕ್ಕಳನ್ನು ಎರಡನೆ ದರ್ಜೆಯ ಪ್ರಜೆಯಾಗಿ ನೋಡುತ್ತಾರೆ. ಹೆಣ್ಣು ಮಕ್ಕಳ ಸುರಕ್ಷತೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದ್ದು, ಈ ಹಿನ್ನೆಯಲ್ಲಿ ಪ್ರತಿ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸಭೆ ಹಾಗೂ ಸಂಜೆ 7 ಗಂಟೆಗೆ ಡಿಸ್ಕಸ್ ವಿತ್ ಡಿಸಿ ಎಂಬ ಕಾರ್ಯಕ್ರಮದೊಂದಿಗೆ ವಿಡಿಯೋ ಸಂವಾದದ ಮೂಲಕ ಎಲ್ಲಾ ವಸತಿ ಶಾಲೆ ಮತ್ತು ವಸತಿ ನಿಲಯಗಳ ಮಕ್ಕಳಲ್ಲಿ ಅರಿವು ಮೂಡಿಸಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಹೆಣ್ಣು ಮಕ್ಕಳ ಸುರಕ್ಷತೆಯನ್ನು ಗಂಭೀರವಾಗಿ ಪರಿಗಣಿಸಿ, ಉದಾಸೀನ ಮಾಡದೆ, ತೀವ್ರತೆಯನ್ನು ಅರಿತು ಸುರಕ್ಷತೆಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಸೇರಿದಂತೆ ಎಲ್ಲಾ ಇಲಾಖೆಯ ಅಧಿಕಾರಿಗಳು ಒಂದು ತಂಡವಾಗಿ ಕೆಲಸ ನಿರ್ವಹಿಸಬೇಕು. ಹೆಣ್ಣು ಮಕ್ಕಳ ಮೇಲೆ ನಡೆಯುವ ದೌರ್ಜನ್ಯಗಳು ಬೆಳಕಿಗೆ ಬರುವುದಿಲ್ಲ, ಎಂತಹ ಸಂದರ್ಭದಲ್ಲೂ ಕೂಡಾ ದೃತಿಗೆಡದೆ ಧೈರ್ಯವಾಗಿ ನಡೆದ ಘಟನೆಯ ಬಗ್ಗೆ ಮುಕ್ತವಾಗಿ ಮಕ್ಕಳು ಹೇಳುವಂತೆ ಪ್ರಜ್ಞಾವಂತರನ್ನಾಗಿ ಮಾಡಬೇಕು. ಜೊತೆಗೆ ಸ್ವಯಂ ರಕ್ಷಣೆ ಮಾಡಿಕೊಳ್ಳಲು ಅವರಿಗೆ ತರಬೇತಿ ನೀಡುವುದರ ಮೂಲಕ ಸಜ್ಜುಗೊಳಿಸಬೇಕು ಎಂದರು.

ಹೆಣ್ಣುಮಕ್ಕಳು ಯಾವುದೇ ತೊಂದರೆಗೆ ಸಿಲುಕಿದಾಗ ಅಂಜದೆ, ಸಂಕೋಚ ಪಡದೆ 1098 ಗೆ ಕರೆ ಮಾಡುವಂತೆ ಅವರಿಗೆ ಧೈರ್ಯ

ತುಂಬಬೇಕು ಎಂದರಲ್ಲದೆ, ಶಾಲೆಯಲ್ಲಿ 18 ವರ್ಷದೊಳಗಿನ ಮಕ್ಕಳು ಮೊಬೈಲ್ ಬಳಕೆ ಹಾಗೂ ಸಾಮಾಜಿಕ ಜಾಲತಾಣಗಳ ಬಳಕೆ ಮಾಡುವಂತಿಲ್ಲ. ಈ ನಿಟ್ಟಿನಲ್ಲಿ ಶಾಲಾ ಕಾಲೇಜುಗಳಲ್ಲಿ ನಿಗಾ ವಹಿಸಬೇಕು ಎಂದರಲ್ಲದೆ, ಪ್ರೀತಿ ಪ್ರೇಮಕ್ಕೆ ಸಿಲುಕಿ ಹೆಣ್ಣು ಮಕ್ಕಳು ತಮ್ಮ ಜೀವನವನ್ನೇ ಹಾಳು ಮಾಡಿಕೊಳ್ಳುತ್ತಾರೆ. ಮೊದಲು ಓದು ಮುಖ್ಯ, ಸರಿದಾರಿಯಲ್ಲಿ ನಡೆದು, ಉತ್ತಮ ಭವಿಷ್ಯ ರೂಪಿಸಿಕೊಳ್ಳುವಂತೆ ಮಕ್ಕಳಿಗೆ ಅರಿವು ಮೂಡಿಸಬೇಕು ಎಂದರಲ್ಲದೆ, ಬಾಲಗರ್ಭಿಣಿಯರಾಗುವುದರಿಂದ ಅವರ ಮೇಲೆ ದೈಹಿಕ ಹಾಗೂ ಮಾನಸಿಕವಾಗಿ ಉಂಟಾಗುವ ದುಷ್ಪರಿಣಾಮದ ಬಗ್ಗೆ ತಾಲ್ಲೂಕು ಆರೋಗ್ಯ ವೈದ್ಯಾಧಿಕಾರಿಗಳು ಮಕ್ಕಳಿಗೆ ತಿಳುವಳಿಕೆ ಮೂಡಿಸಿ ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಪೋಕ್ಸೊ ಪ್ರಕರಣಗಳಲ್ಲಿ ಶಿಕ್ಷೆ ಆಗುವುದರ ಬಗ್ಗೆ ಮಕ್ಕಳಿಗೆ ಕಿರುಚಿತ್ರದ ಮೂಲಕ ತಿಳುವಳಿಕೆ ನೀಡಬೇಕು ಎಂದರಲ್ಲದೆ, ಆಕಾಶವಾಣಿ ಹಾಗೂ ಸ್ಥಳೀಯ ಕೇಬಲ್ ವಾಹಿನಿಗಳ ಮೂಲಕವೂ ಕೂಡಾ ಅರಿವು ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಬಾಲ್ಯ ವಿವಾಹ, ಲೈಗಿಂಕ ದೌರ್ಜನ್ಯದಂತಹ ವಿಷಯಗಳ ಕುರಿತು ಕಡ್ಡಾಯವಾಗಿ ಎಲ್ಲಾ ಶಾಲೆಗಳಲ್ಲಿ ಪ್ರತಿಯೊಂದು ಮಗುವಿನಿಂದ ಸಮಸ್ಯೆ ಮತ್ತು ಪರಿಹಾರದ ಬಗ್ಗೆ ಪ್ರಬಂಧ ಬರೆಸಲು ಕ್ರಮ ವಹಿಸುವಂತೆ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಪರಿಣಾಮಕಾರಿಯಾಗಿ ತಡೆಗಟ್ಟುವ ನಿಟ್ಟಿನಲ್ಲಿ ಮಕ್ಕಳ ಗ್ರಾಮ ಸಭೆಗಳಲ್ಲೂ ಕೂಡಾ ಬಾಲ್ಯ ವಿವಾಹ, ಬಾಲ ಕಾರ್ಮಿಕತೆ, ಬಾಲ ಗರ್ಭಿಣಿ, ಪೋಕ್ಸೊ, ಹೆಣ್ಣುಮಕ್ಕಳ ಸುರಕ್ಷತೆ ಕುರಿತು ಅರಿವು ಮೂಡಿಸಬೇಕು ಎಂದರಲ್ಲದೆ, ತಾಂಡ, ಗೊಲ್ಲರಹಟ್ಟಿ, ಕಾಫಿ ಎಸ್ಟೇಟ್, ವಲಸೆ ಕಾರ್ಮಿಕರಲ್ಲಿ ಅರಿವು ಮೂಡಿಸಲು ಕಾರ್ಯಕ್ರಮ ಆಯೋಜಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ದಾಖಲಾಗಿರುವ ಹಾಗೂ ಜನವರಿಯಿಂದ ಇದುವರೆಗೆ ದಾಖಲಾಗಿರುವ ಪೋಕ್ಸೊ ಪ್ರಕರಣಗಳ ಬಗ್ಗೆ ತಾಲ್ಲೂಕುವಾರು ಮಾಹಿತಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರಲ್ಲದೆ, ಪೋಕ್ಸೊ ಪ್ರಕರಣಗಳಲ್ಲಿ ಕೃತ್ಯ ಯಾರಿಂದ, ಎಲ್ಲಿ, ಯಾರ ಮೇಲೆ ನಡೆದಿದೆ ಎಂಬುದರ ಬಗ್ಗೆ ಹಾಗೂ ಆ ಮಕ್ಕಳ ಹಿನ್ನೆಲೆಯ ಬಗ್ಗೆ ಕೂಡಾ ಮಾಹಿತಿ ನೀಡುವಂತೆ ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ|| ಅನಿಲ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ಧರಣಿಕುಮಾರ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ದಿಲೀಪ್ ಹಾಗೂ ಮತ್ತಿತರ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಹನುಮಾನೋತ್ಸವಕ್ಕೆ ಭರದ ಸಿದ್ಧತೆ

• ಪ್ರಜೋದಯ ವರದಿ

ಹೊಳೆನರಸೀಪುರ: ಪಟ್ಟಣದಲ್ಲಿ ಯುವಕರ ತಂಡ ವೈಭವೋಪೇತವಾಗಿ ನಡೆಸಲಿರುವ ಹನುಮಾನೋತ್ಸವಕ್ಕೆ ಪುರಸಿಂಗಾರ ನಡೆದಿದ್ದು, ಕೇಸರಿಮಯಗೊಳಿಸಲಾಗಿದೆ.

ಹನುಮಾನೋತ್ಸವ ಆಚರಣಾ ಸಮಿತಿ ಹನುಮನ ಭಕ್ತಿಯೊಂದಿಗೆ ರಾಷ್ಟ್ರಪ್ರೇಮ ಮರೆದಿದೆ. ಪಟ್ಟಣದ ಶ್ರೀಲಕ್ಷ್ಮಿನರಸಿಂಹಸ್ವಾಮಿ ದೇವಾಲಯದ ಮುಂದೆ ಡಿ.13ರ ಶನಿವಾರ ಬೆಳಿಗ್ಗೆ 9 ಗಂಟೆಗೆ ಅಭಿಷೇಕ ಪೂಜಾ ಕೈಕಂರ್ಯ ನಡೆಯಲಿದೆ. ನಂತರ ಪ್ರಮುಖ ಬೀದಿಗಳಲ್ಲಿ ಹತ್ತಾರು ಹನುಮನ ಪ್ರತಿಮೆಯೊಂದಿಗಿನ ರಥದೊಂದಿಗೆ ಶೋಭಾ ಯಾತ್ರೆ ನಡೆಸಲಿದೆ.

ಹತ್ತಾರು ಸಾಂಸ್ಕೃತಿಕ ಕಲಾತಂಡಗಳು ಯುವಕರ ಶ್ರೀರಾಮ್ ಘೋಷಣೆಯೊಂದಿಗೆ ಮೇಳೈಸಲಿದೆ. ಪಕ್ಷಾತೀತವಾಗಿ, ಜ್ಯಾತ್ಯಾತೀತವಾಗಿ ಎಲ್ಲ ದೇಶಭಕ್ತರೆಲ್ಲರೂ ಪಾಲ್ಗೊಳ್ಳುವ ನಿರೀಕ್ಷೆಯಲ್ಲಿ ಸಮಿತಿ ಸದಸ್ಯರು ಮನವಿ ಮಾಡಿಕೊಂಡಿದ್ದಾರೆ.

ಬೃಹತ್ ಕೇಸರಿ ಧ್ವಜಗಳು, ಬಂಟಿಂಗ್‌ಗಳು ಪ್ರತಿ ವೃತ್ತ ಮತ್ತು ಬೀದಿಗಳಲ್ಲಿ ರಾರಾಜಿಸುತ್ತಿವೆ. ಹಗಲಿರುಳು ಯುವಕರು ಶ್ರಮಿಸುತ್ತಿದ್ದು, ಸಾರ್ವಜನಿಕರಧಾರ್ಮಿಕ ಗುರುಗಳು, ಸ್ವಾಮೀಜಿಗಳು ಹಾಗೂ ರಾಜಕೀಯ ಮುಖಂಡರು ಭಾಗಿಯಾಗಲಿದ್ದಾರೆ.

ತಾಲೂಕು ಕಚೇರಿ ಮುಂಭಾಗದ ಸಾರ್ವಜನಿಕ ಸಮುದಾಯ ಭವನದಲ್ಲಿ ಮಧ್ಯಾಹ್ನ ಭಕ್ತರಿಗೆ ಅನ್ನಪ್ರಸಾದ ವಿತರಿಸಲಾಗುವುದು.

ಗ್ಯಾರಂಟಿ ರಾಮಣ್ಣಗೆ ಅಧಿಕೃತ ಆಹ್ವಾನ

• ಪ್ರಜೋದಯ ವರದಿ

ಹಾಸನ: ನಾಲ್ಕೆದು ದಶಕಗಳಿಂದ ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೇ ಸಾಹಿತ್ಯ ಹಾಗೂ ಜಾನಪದ ಕ್ಷೇತ್ರದಲ್ಲಿ ನಿಸ್ವಾರ್ಥವಾಗಿ ಗಣನೀಯ ಸೇವೆ ಸಲ್ಲಿಸುತ್ತಿರುವ ಹಿರಿಯ ಹಾಗೂ ಪ್ರಗತಿಪರ ಸಾಹಿತಿ ಗ್ಯಾರಂಟಿ ರಾಮಣ್ಣನವರ ಆಯ್ಕೆ ನಮ್ಮ ವೇದಿಕೆಯ ಘನತೆಯನ್ನು ಹೆಚ್ಚಿಸಿದೆ ಎಂದು ಸಂಸ್ಥಾಪಕ ಅಧ್ಯಕ್ಷ ಕೊಟ್ರೇಶ್ ಎಸ್.ಉಪ್ಪಾರ್ ಅಭಿಪ್ರಾಯಪಟ್ಟರು.

ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ವತಿಯಿಂದ ಕಂಚಮಾರನಹಳ್ಳಿ ಗ್ಯಾರಂಟಿ ರಾಮಣ್ಣನವರ ಸ್ವಗೃಹದಲ್ಲಿ ಅಧಿಕೃತ ಆಹ್ವಾನ ನೀಡಿ ಮಾತನಾಡಿ, ಗ್ಯಾರಂಟಿ ರಾಮಣ್ಣನವರು ಜಿಲ್ಲೆ ಕಂಡಂತಹ ಸಾತ್ವಿಕ ಸ್ವಭಾವದ ಪ್ರಬುದ್ಧ ಬರಹಗಾರ, ಗಾಯಕ, ರಂಗಕರ್ಮಿ. ಹಾಸನದಲ್ಲಿ ಯಾವುದೇ

ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಕಾರ್ಯಕ್ರಮಗಳು ನಡೆಯಲಿ ಅಲ್ಲಿ ಗ್ಯಾರಂಟಿ ರಾಮಣ್ಣನವರು ಹಾಜರಿರುತ್ತಾರೆ. ನಮ್ಮಂತಹ ಅನೇಕ ವ್ಯಕ್ತಿ ಹಾಗೂ ಸಂಘಟನೆಗಳಿಗೆ ಮಾರ್ಗದರ್ಶಿಯಾಗಿ ರಾಮಣ್ಣ ಅವರು ನಿರಂತರವಾಗಿ ಶಕ್ತಿಯಾಗಿ ನಿಲ್ಲುತ್ತಾರೆ ಎಂದರು.

ನಿಯೋಜಿತ ಸಮ್ಮೇಳನಾಧ್ಯಕ್ಷ ಗ್ಯಾರಂಟಿ ರಾಮಣ್ಣ ಆಹ್ವಾನ ಸ್ವೀಕರಿಸಿ ಮಾತನಾಡಿ, ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ಪ್ರಾರಂಭದಿಂದಲೂ ಎಲೆಮರೆ ಸಾಧಕರನ್ನು ಗುರುತಿಸಿ ಮುಖ್ಯ ವೇದಿಕೆಗೆ ತರುವ ಕೆಲಸವನ್ನು ಮಾಡುತ್ತಾ ಬಂದಿದೆ. ಜಿಲ್ಲಾ ಪ್ರಥಮ ಸಮ್ಮೇಳನಕ್ಕೆ ಸರ್ವಾಧ್ಯಕ್ಷನನ್ನಾಗಿ ನನ್ನನ್ನು ನೇಮಿಸಿರುವುದು ಸಾಕ್ಷಿಯಾಗಿದೆ ಎಂದು ಹೇಳಿದರು.

ನನ್ನ ಜವಬ್ದಾರಿ ಮುಮ್ಮಡಿಗೊಂಡಿದೆ. ನನ್ನ ಹವ್ಯಾಸ ಕ್ಷೇತ್ರಗಳಲ್ಲಿ ಮತ್ತಷ್ಟು ಮಗದಷ್ಟು ಸೇವೆ ಸಲ್ಲಿಸಲು ಶಕ್ತಿ ಹೆಚ್ಚಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು ಎಂದರು.

ಹೆಚ್.ಐ.ವಿ. ಸೋಂಕಿತರ ಪಟ್ಟಿ: ಆಲೂರಿಗೆ ಕೊನೇ ಸ್ಥಾನ

• ಪ್ರಜೋದಯ ವರದಿ

ಆಲೂರು: ಹೆಚ್.ಐ.ವಿ. ಸೋಂಕಿತರ ಪಟ್ಟಿಯಲ್ಲಿ ಆಲೂರು ಕೊನೆಯ ಸ್ಥಾನದಲ್ಲಿದೆ ಎಂದು ಆರೋಗ್ಯ ಶಿಕ್ಷಣಾಧಿಕಾರಿ ಸತೀಶ್ ತಿಳಿಸಿದರು.

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಮಂಗಳವಾರ ತಾಲ್ಲೂಕು ಆರೋಗ್ಯಾಧಿಕಾರಿಗಳ ಕಚೇರಿ, ಸಾರ್ವಜನಿಕ ಆಸ್ಪತ್ರೆ, ತಾಲ್ಲೂಕು ಕಾನೂನು ಸೇವಾ ಸಮಿತಿ ಮತ್ತು ತಾಲ್ಲೂಕು ವಕೀಲರ ಸಂಘ ಆಲೂರು ಇವರ ಸಂಯುಕ್ತಾಶ್ರಯದಲ್ಲಿ ವಿಶ್ವ ಏಡ್ಸ್ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಜಿಲ್ಲೆಯಲ್ಲಿ ಹೆಚ್.ಐ.ವಿ. ಸೋಂಕಿತರು ಪಟ್ಟಿಯಲ್ಲಿ ಚನ್ನರಾಯಪಟ್ಟಣ ಮೊದಲ ಸ್ಥಾನ, ಹಾಸನ ಎರಡನೆ, ಆರಸೀಕೆರೆ ಮೂರನೆ ಮತ್ತು ಹೊಳೆನರಸೀಪುರ

ನಾಲ್ಕನೆ ಸ್ಥಾನದಲ್ಲಿ ಇದೆ.

ಜಿಲ್ಲೆಯಲ್ಲಿ 13293 ಜನ ಸೋಂಕಿತರಿದ್ದು, ಆಲೂರು ತಾಲ್ಲೂಕಿನಲ್ಲಿ 441 ಸೋಂಕಿತರಿದ್ದಾರೆ. ಏಡ್ಸ್ ರೋಗವು ಹೆಚ್.ಐ.ವಿ ವೈರಸ್‌ನಿಂದ ಹರಡುವ ರೋಗವಾಗಿದ್ದು, ಇದು ದೇಹದ ರಕ್ಷಣಾ ವ್ಯವಸ್ಥೆಯನ್ನು ಕುಂದಿಸುವುದಲ್ಲದೆ ರೋಗ ನಿರೋದಕ ಶಕ್ತಿ ಕಡಿಮೆ ಮಾಡುತ್ತದೆ ಎಂದರು.

ಜೆ.ಎಂ.ಎಫ್. ನ್ಯಾಯಾಲಯದ ಸಹಾಯಕ ಸರ್ಕಾರಿ ಅಭಿಯೋಜಕ ವಿಜಯ್ ಸಂಪಂಗಾವಿ ಉದ್ಘಾಟನೆ ನೆರವೇರಿಸಿ ಮಾತನಾಡಿ, ಹೆಚ್.ಐ.ವಿ. ಸೋಂಕಿತರನ್ನು ಸಮಾಜದಿಂದ ದೂರ ಇಡದೆ ಸಮಾನ ಅವಕಾಶಗಳನ್ನು ನೀಡಿ ಕಳಂಕ ತಾರತಮ್ಯದಿಂದ ಹೊರ ತರಬೇಕು. ಹೆಚ್.ಐ.ವಿ ಸೊಂಕಿತರು ಎಲ್ಲರಂತೆ ಬದುಕಲು ಕಾನೂನಿನಲ್ಲಿ ಅವಕಾಶವಿದೆ. ಸಾಮಾಜಿಕ ಸವಲತ್ತುಗಳೊಂದಿಗೆ ಎಲ್ಲಾ ಕ್ಷೇತ್ರದಲ್ಲೂ ಇರುವ ಅವಕಾಶಗಳನ್ನು ಕಲ್ಪಿಸಿಕೊಟ್ಟು ಸಮಾಜದ ಮುಖ್ಯ ವಾಹಿನಿಗೆ ಕರೆತರಬೇಕು ಎಂದರು.

ವಕೀಲರ ಸಂಘದ ಅಧ್ಯಕ್ಷ ಎಂ.ಎಸ್. ಮಹೇಶ್ ಅವರು ಮಾತನಾಡಿ, ಹೆಚ್.ಐ.ವಿ. ಸೋಂಕಿತರಿಗೆ ಉಚಿತ ಕಾನೂನು ಸಲಹೆ ಲಭ್ಯವಿದೆ. ಏಡ್ಸ್ ರೋಗವು ಹೆಚ್.ಐ.ವಿ ವೈರಸ್‌ನಿಂದ ಹರಡುವ ರೋಗವಾಗಿದ್ದು, ಇದು ದೇಹದ ರಕ್ಷಣಾ ವ್ಯವಸ್ಥೆಯನ್ನು ಕುಂದಿಸುವುದಲ್ಲದೆ ರೋಗ ನಿರೋಧಕ ಶಕ್ತಿ ಕಡಿಮೆ ಮಾಡುತ್ತದೆ ಎಂದರು.

ಪ್ರಭಾರಿ ಪ್ರಾಂಶುಪಾಲ ಇರ್ಫಾನ್ ಪಾಷ ಮಾತನಾಡಿ, ಪ್ರತಿ ವರ್ಷ ಡಿಸೆಂಬರ್ ಮಾಹೆಯಲ್ಲಿ ವಿಶ್ವದ ಎಲ್ಲಾ ಕಡೆ ಏಡ್ಸ್ ನಿಯಂತ್ರಣದ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ವಿಶೇಷವಾಗಿ ಕಾಲೇಜು ವಿದ್ಯಾರ್ಥಿಗಳು ಹದಿಹರೆಯದ ವಯಸ್ಸಿನವರಾಗಿದ್ದು, ಏಡ್ಸ್ ಬಗ್ಗೆ ಹೆಚ್ಚಿನ ಜಾಗೃತರಾಗುವಂತೆ ತಿಳಿಸಿದರಲ್ಲದೆ, ಹೆಚ್.ಐ.ವಿ ಮುಕ್ತ ಸಮಾಜವನ್ನು ನಿರ್ಮಿಸಬೇಕು ಎಂದರು.

ವಕೀಲರ ಸಂಘದ ಖಜಾಂಚಿ ಮೋಹನ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಮೋಹನ್, ಐ.ಸಿ.ಟಿ.ಸಿ ವಿಭಾಗದ ಆಪ್ತಸಮಾಲೋಚಕರಾದ ಗೌರಿ, ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿ ಲೋಕೇಶ್, ಆರೋಗ್ಯ ಇಲಾಖೆಯ ಸಿಬ್ಬಂದಿ ಹಾಜರಿದ್ದರು.

ಅರ್ಜಿ ಆಹ್ವಾನ

ಹಾಸನ: ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯ ವಿಶೇಷ ಘಟಕ / ಗಿರಿಜನ ಉಪ ಯೋಜನೆಯಡಿ 2025-26 ನೇ ಸಾಲಿಗೆ ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದ ಸಣ್ಣ ಮತ್ತು ಅತಿ ಸಣ್ಣ (ಎಸ್.ಎಮ್.ಇ) ಘಟಕಗಳನ್ನು ಪ್ರಾರಂಭಿಸಲು ಉತ್ತೇಜಿಸುವ ಸಲುವಾಗಿ ನೇಕಾರರ ಪ್ಯಾಕೇಜ್ ಯೋಜನೆಯಡಿ ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಣ್ಣ ಮತ್ತು ಅತಿ ಸಣ್ಣ (ಎಸ್.ಎಮ್.ಇ) ಘಟಕಗಳ ಸ್ಥಾಪನೆಗೆ ಸಹಾಯಧನ ಯೋಜನೆಯಡಿ ಹೊಸ ಘಟಕಗಳ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಕೇಂದ್ರ ಕಚೇರಿ, ಬೆಂಗಳೂರು ಇವರು ಸೂಚಿಸಿದ್ದು, ಈ ಯೋಜನೆಯಡಿ ಸರ್ಕಾರವು ಮಾರ್ಗ ಸೂಚಿಯನ್ವಯ ಅನುಷ್ಠಾನಗೊಳಿಸಲಾಗುವುದು.

ದಿಡಗ ಭಾಗದ ಹತ್ತಾರು ವರ್ಷಗಳ ರೈತರ ಕನಸು ನನಸು

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ದಿಡಗ ಭಾಗದ ರೈತರ ಹತ್ತಾರು ವರ್ಷಗಳ ಕನಸಾಗಿದ್ದ ಏತ ನೀರಾವರಿ ಯೋಜನೆಗೆ ರಾಜ್ಯ ಕಾಂಗ್ರೆಸ್ ಸರ್ಕಾರ 74 ಕೋಟಿ ರೂ. ಗಳ ಅನುದಾನ ಬಿಡುಗಡೆ ಮಾಡುವ ಮೂಲಕ ನನಸು ಮಾಡಿದೆ ಎಂದು ಮಾಜಿ ವಿಧಾನ ಪರಿಷತ್ ಶಾಸಕ ಎಂ.ಎ.ಗೋಪಾಲಸ್ವಾಮಿ ಹೇಳಿದರು.

ತಾಲ್ಲೂಕಿನ ಕೆ.ವಡ್ಡರಹಳ್ಳಿ ಗ್ರಾಮದಲ್ಲಿ ಸಮುದಾಯ ಭವನ ಉದ್ಘಾಟನೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ದಿಡಗ ಭಾಗದ ರೈತರು ದಿಡಗ ಮತ್ತು ದಿಡಗ ತುಮಕೂರು ಗ್ರಾಮದ ಕೆರೆ ತುಂಬಿಸುವಂತೆ ಹಲವು ವರ್ಷಗಳಿಂದ ಮನವಿ ಮಾಡುತ್ತಾ ಬಂದಿದ್ದರೂ ತಾವು ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮತ್ತು ಉಪಮುಖ್ಯಮಂತ್ರಿ ಡಿ.ಕೆ.

ಶಿವಕುಮಾರ್ ಅವರಿಗೆ ಯೋಜನೆಗೆ ಅನುದಾನ ಬಿಡುಗಡೆ ಮಾಡುವಂತೆ ಈ ಭಾಗದ ರೈತರೊಂದಿಗೆ ತೆರಳಿ ಮನವಿ ಮಾಡಲಾಗಿತ್ತು. ಇದಕ್ಕೆ ಸರ್ಕಾರ ಸ್ಪಂದಿಸಿ ಅನುದಾನ ಬಿಡುಗಡೆ ಮಾಡಿ ಹಾಸನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಯೋಜನೆಗೆ ಶಂಕುಸ್ಥಾಪನೆ ನೆರವೇರಿಸಲಾಗಿದೆ ಎಂದು ಅವರು ಹೇಳಿದರು.

ರೈತರ ಹತ್ತಾರು ವರ್ಷಗಳ ಕನಸು ನನಸು: ಅನೇಕ ವರ್ಷಗಳಿಂದ ಈ ಭಾಗದಲ್ಲಿ ಕೆರೆಗಳು ತುಂಬದೇ ರೈತರು ಸಮಸ್ಯೆ ಎದುರಿಸುತ್ತಿದ್ದರು ಈ ಭಾಗದ ಜನ ಜಾನುವಾರುಗಳಿಗೆ ಹಕ್ಕಿ ಪಕ್ಷಿಗಳಿಗೂ ಕೂಡ ಕುಡಿಯುವ ನೀರಿಗೂ ಸಮಸ್ಯೆಯಾಗಿತ್ತು ನಾಗಮಂಗಲ ಭಾಗದ ಹೇಮಾವತಿ ನಾಲೆಯಿಂದ ಏತ ನೀರಾವರಿ ಯೋಜನೆ ಮೂಲಕ ಈ ಭಾಗದ ಕೆರೆಗಳನ್ನು ತುಂಬಿಸಲು ಯೋಜನೆ ರೂಪಿಸಲಾಗಿದೆ ಎಂದು ತಿಳಿಸಿದರು.

ಕೆ.ವಡ್ಡರಹಳ್ಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಸಮುದಾಯ ಭವನಕ್ಕೆ ನಾನು ಸುಮಾರು 07 ಲಕ್ಷ ಹಣ ನೀಡಿದ್ದೇನೆ. ನನ್ನ ವಿಧಾನ ಪರಿಷತ್ ಸದಸ್ಯರ ಅವಧಿಯಲ್ಲಿ ಜಿಲ್ಲೆಯ ಹಾಗೂ ತಾಲೂಕಿನ ನೀರಾವರಿ ಸೇರಿದಂತೆ ಅನೇಕ ಅಭಿವೃದ್ಧಿ ಕೆಲಸಗಳಿಗೆ ಹೆಚ್ಚು ಶ್ರಮವಹಿಸಿರುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ವಡ್ಡರಹಳ್ಳಿ ಮೋಹನ್, ನಟೇಶ್, ಪ್ರಮೋದ್, ವಿ.ಹೆಚ್.ರಮೇಶ್, ವಿ.ಎನ್.ಬೋರೇಗೌಡ, ವಿ.ಹೆಚ್. ಹನುಮಂತೇಗೌಡ ಹಾಜರಿದ್ದರು.

ನಾಳೆ ವಿದ್ಯುತ್ ವ್ಯತ

ಬೇಲೂರಿನಲ್ಲಿ ಪಾರ್ಕಿಂಗ್ ಹೆಸರಲ್ಲಿ ಬೇಕಾಬಿಟ್ಟಿ ಶುಲ್ಕ

ದೇವಾಲಯ ಆಡಳಿತ ಸಿಬ್ಬಂದಿಯಿಂದಲೇ ಕೃತ್ಯ । ಪ್ರವಾಸಿಗರು ಹೈರಾಣ

• ಪ್ರಜೋದಯ ವರದಿ

ಬೇಲೂರು: ವಿಶ್ವ ವಿಖ್ಯಾತ ಹೊಯ್ಸಳರ ಶಿಲ್ಪಕಲೆಯ ಚನ್ನಕೇಶವ ದೇವಾಲಯ ವೀಕ್ಷಣೆಗೆ ನಿತ್ಯ ಬರುವ ಸಾವಿರಾರು ಪ್ರವಾಸಿಗರಿಗೆ ಪಾರ್ಕಿಂಗ್ ಹೆಸರಿನಲ್ಲಿ ಭಾರೀ ದೋಖಾ ಮಾಡಲಾ ಗುತ್ತಿದೆ ಎಂಬ ಗಂಭೀರ ಆರೋಪ ಕೇಳಿಬಂದಿದೆ.

ಸರಿಯಾದ ಪಾರ್ಕಿಂಗ್ ವ್ಯವಸ್ಥೆ ಇದ್ದರೂ ದೇವಾಲಯದ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ನಿರ್ಲಕ್ಷ್ಯದಿಂದ ಪ್ರವಾಸಿಗರು ಸಂಬಂಧಪಟ್ಟವರಿಗೆ ಛೀಮಾರಿ ಹಾಕುತ್ತಿದ್ದಾರೆ. ದೇವಾಲಯ ಸಿಬ್ಬಂದಿಯೇ ಪಾರ್ಕಿಂಗ್ ಹೆಸರಿನಲ್ಲಿ ಹಣ ವಸೂಲಿ ಮಾಡುತ್ತಿರುವುದು ಬೆಳಕಿಗೆ ಬಂದಿದೆ. ಜಗತ್ಪ್ರಸಿದ್ಧ ಚನ್ನಕೇಶ್ವರ ದೇವಾಲಯ ವೀಕ್ಷಣೆಗೆ ಬರುವ ಪ್ರವಾಸಿಗರು ಬೇಲೂರಿಗೆ ಬಂದ ತಕ್ಷಣ ಇದು ಪಾರ್ಕಿಂಗ್ ಶುಲ್ಕವೇ ಅಥವಾ ಬೇಲೂರಿಗೆ ಬಂದ ತಪ್ಪಿಗೆ ವಿಧಿಸುವ ದಂಡವೇ ಎಂದು ಗಾಬರಿಯಾಗುವ ಸನ್ನಿವೇಶ ಸೃಷ್ಟಿಯಾಗಿದೆ.

ದೇವಾಲಯದ ಮುಂಭಾಗ ಬಂದ ತಕ್ಷಣವೇ ಸಿಬ್ಬಂದಿ ವಾಹನಗಳನ್ನು ರಸ್ತೆಯಲ್ಲಿ ಅಡ್ಡಗಟ್ಟಿ ಮನಬಂದಂತೆ ಪಾರ್ಕಿಂಗ್ ಸುಂಕವನ್ನು ವಿಧಿಸುತ್ತಿದ್ದು ಪ್ರವಾಸಿಗರ ಆಕ್ರೋಶಕ್ಕೆ ಕಾರಣವಾಗಿದೆ. ಇನ್ನು ಅಂತರ್ ರಾಜ್ಯ ಪ್ರವಾಸಿಗರ ವಾಹನಗಳಿಗೆ ನಿಗದಿತ ದರಕ್ಕಿಂತ ದುಪ್ಪಟ್ಟು ವಸೂಲಿ ಮಾಡುತ್ತಿದ್ದು,

ಭಾಷೆ ಬಾರದ ಕಾರಣ ವಾಹನ ಸವಾರರಿಂದ ವಿಚಿತ್ರ ರೀತಿಯಲ್ಲಿ ಹಣ ವಸೂಲಿ ಮಾಡಲಾಗುತ್ತಿದೆ ಎಂದು ಸಾರ್ವಜನಿಕ ವಲಯದಲ್ಲಿ ಗಂಭೀರ ಆರೋಪ ಕೇಳಿಬಂದಿವೆ.

ದೇವಾಲಯ ಸಿಬ್ಬಂದಿ ನಿರ್ಲಕ್ಷ್ಯ

ಪಾರ್ಕಿಂಗ್ ಗೊಂದಲಕ್ಕೆ ಸುಗಮ ಪರಿಹಾರ ನೀಡಬೇಕಾದ ದೇವಾಲಯದ ಆಡಳಿತ ಅಧಿಕಾರಿ ಹಾಗೂ ಸಿಬ್ಬಂದಿ ಕೇವಲ ಪ್ರವಾಸಿಗರಿಂದ ಹಣ ವಸೂಲಿ ಮಾಡುವುದರಲ್ಲಿ ತಲ್ಲೀನರಾಗಿದ್ದು ಶನಿವಾರ, ಭಾನುವಾರ ಸಾವಿರಾರು ವಾಹನಗಳು ದೇಗುಲಕ್ಕೆ ಆಗಮಿಸುತ್ತವೆ. ಪಾರ್ಕಿಂಗ್ ಲೆಕ್ಕ ಮಾತ್ರ ದೇಗುಲಕ್ಕೆ ಬೆಳ್ಳಣಿಕೆಯಷ್ಟು ನೀಡುತ್ತಿದ್ದು ಉಳಿದ ಹಣ ಎಲ್ಲಿ ಹೋಗುತ್ತಿದೆ ಎಂದು ಅನುಮಾನ ಕಾಡುತ್ತಿದೆ. ಜೊತೆಗೆ ಅಧಿಕಾರಿಗಳು ಕೈಕಟ್ಟಿ ಮೌನವಾಗಿರುವುದು ಸಾರ್ವಜನಿಕರನ್ನು ಹೆಚ್ಚಾಗಿ ಕೋಪಗೊಳಿಸಿದೆ.

ಜಿಲ್ಲಾಧಿಕಾರಿಗಳಿಂದ ಪಾರ್ಕಿಂಗ್ ಕುರಿತು ಹಲವು ಕ್ರಮಗಳನ್ನು ಜಾರಿಗೊಳಿಸಿ ಸೂಚನೆ ಬಂದರೂ ಕ್ಯಾರೆ ಇಲ್ಲ ಎನ್ನುವಂತೆ ಅಧಿಕಾರಿಗಳ ಮತ್ತು ಸಿಬ್ಬಂದಿಗಳ ವರ್ತನೆ ತೋರುತ್ತಿದ್ದು ಮುಂದಿನ ದಿನಗಳಲ್ಲಿ ಇದು ಯಾವ ಹಾದಿ ಹಿಡಿಯುತ್ತದೆ ಎಂದು ಕಾದು ನೋಡಬೇಕಾಗಿದೆ.

ನಯನ ಮನೋಹರ ಶ್ರೀ ಚನ್ನಕೇಶವ ಸ್ವಾಮಿ ತಾಣಕ್ಕೆ ಶ್ರೀ ಚನ್ನಕೇಶವನನ್ನು ನೋಡಲು ಮತ್ತು ಇಲ್ಲಿಯ ಶಿಲ್ಪ ಕಲೆಗಳನ್ನು ಆನಂದಿಸಲು ದೇಶವಿದೇಶಗಳಿಂದ ಆಗಮಿಸುವವರ ಮೊದಲು ಕಂಡುಬರುವ ಅನುಭವವೇ ಪಾರ್ಕಿಂಗ್ ದಂಧೆ. ಪ್ರವಾಸೋದ್ಯಮವನ್ನು ಉತ್ತೇಜಿಸುವ ಬದಲು ಜನರನ್ನು ಕೆಣಕುವ ಕೆಲಸ ಇಲ್ಲಿ ನಡೆಯುತ್ತಿರುವುದರ ಮೇಲೆ ತಕ್ಷಣದ ಕ್ರಮ ಅನಿವಾರ್ಯವಾಗಿದೆ ಇನ್ನಾದರೂ ಸಂಬಂಧಪಟ್ಟ ಹಿರಿಯ ಅಧಿಕಾರಿಗಳು ದೇವಾಲಯದ ಆಡಳಿತ ಅಧಿಕಾರಿ ಮತ್ತು ಸಿಬ್ಬಂದಿ ಮೇಲೆ ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಪಾಂಡ್ಯ ಸ್ಫೋಟಕ ಬ್ಯಾಟಿಂಗ್: ಸ್ಪರ್ಧಾತ್ಮಕ ಮೊತ್ತ

• ಪ್ರಜೋದಯ ವರದಿ

ಕಟಕ್: ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಿನ 5 ಪಂದ್ಯಗಳ ಟಿ-20 ಸರಣಿಯ ಮೊದಲ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಭಾರತ ತಂಡ ದಕ್ಷಿಣ ಆಫ್ರಿಕಾಕ್ಕೆ ಸ್ಪರ್ಧಾತ್ಮಕ ಮೊತ್ತವನ್ನು ಗುರಿ ಯಾಗಿ ನೀಡಿತು. 20 ಓವರ್‌ಗಳಲ್ಲಿ ಭಾರತ ತಂಡ 6 ವಿಕೆಟ್ ನಷ್ಟಕ್ಕೆ 176 ರನ್ ಗಳಿಸಿತು.

ಒಡಿಶಾದ ಕಟಕ್‌ನ ಬಾರಾಬತಿ ಕ್ರೀಡಾಂಗಣದಲ್ಲಿ ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿದ ಟೀಂ ಇಂಡಿಯಾ ಆಟಗಾರರು ದಕ್ಷಿಣ ಆಫ್ರಿಕಾದ ಬೌಲರ್‌ಗಳ ಎದುರು ಸಪ್ಪೆಯಾದರು. ಆದರೆ, ಮಧ್ಯಮ ಕ್ರಮಾಂಕದಲ್ಲಿ ಬಂದ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ಭಾರತ ಸ್ಪರ್ಧಾತ್ಮಕ ಮೊತ್ತವನ್ನು ಪೇರಿಸಲು ಕಾರಣವಾಯಿತು.

ಹಾರ್ದಿಕ್ 28 ಎಸೆತಗಳಲ್ಲಿ 59 ರನ್ ಗಳಿಸಿ ಔಟಾಗದೇ ಉಳಿದರು. ಅವರಿಗೆ ಜಿತೇಶ್ ಶರ್ಮಾ (10) ಶಿವಂ ದುಬೆ ಉತ್ತಮ ಸಾಥ್ ನೀಡಿದರು. ಅವರು ಎರಡು ಫೋರ್‌ಗಳೊಂದಿಗೆ 11 ರನ್ ಪೇರಿಸಿದರು. ಉಳಿದಂತೆ ತೀವ್ರ ನಿರೀಕ್ಷೆ ಹುಟ್ಟಿಸಿದ್ದ ಶುಭಮನ್ ಗಿಲ್ ಮಿಂಚಲಿಲ್ಲ. ಅವರು 4 ರನ್ ಗಳಿಸಿ ಲುಂಗಿಗೆ ವಿಕೆಟ್ ಕೊಟ್ಟು ಔಟಾದರು. ಅಭಿಷೇಕ್ ಶರ್ಮಾ 17, ಸೂರ್ಯಕುಮಾರ್ ಯಾದವ್ 12, ತಿಲಕ್ ಕುಮಾರ್ ವರ್ಮಾ 26, ಅಕ್ಷರ್ ಪಟೇಲ್ 23 ರನ್ ಬಾರಿಸಿ ಮಿಂಚಿದರು.

ದಕ್ಷಿಣ ಆಫ್ರಿಕಾದ ಪರ ಲುಂಗಿ ಎನ್ಗಿಡಿ ಅವರು 3 ವಿಕೆಟ್ ಕಿತ್ತು ಮಿಂಚಿದರು. ಪ್ರವಾಸಿ ದಕ್ಷಿಣ ಆಫ್ರಿಕಾ ವಿರುದ್ಧದ 2 ಪಂದ್ಯಗಳ ಟೆಸ್ಟ್ ಸರಣಿಯನ್ನು 2-0 ಅಲ್ಲಿ ಸೋತಿದ್ದ ಭಾರತ ತಂಡವು, ಏಕದಿನ ಸರಣಿಯನ್ನು 2-1ರಲ್ಲಿ ಗೆದ್ದುಕೊಂಡು ಬೀಗಿತ್ತು. ಇದೇ ರೀತಿ ತವರಲ್ಲಿ ನಡೆಯುತ್ತಿರುವ ಟಿ-20 ಸರಣಿಯನ್ನು ಗೆದ್ದು ಮುನ್ನಡೆಯಲು ತಯಾರಿ ಮಾಡಿಕೊಂಡಿದೆ.

ಮುಂದಿನ ವರ್ಷ ಭಾರತ ಮತ್ತು ಶ್ರೀಲಂಕಾದಲ್ಲಿ ನಡೆಯಲಿರುವ ಟಿ-20 ವಿಶ್ವಕಪ್‌ಗೆ ಪೂರ್ವ ಸಿದ್ಧತೆಯಂತಿರುವ ಈ ಸರಣಿಯನ್ನು ಗೆಲ್ಲಲು, ಉಭಯ ತಂಡಗಳು ಕೂಡ ತುಂಬಾ ಉತ್ಸಾಹದಲ್ಲಿವೆ.

ಹೇಮಾವತಿ ನಾಲೆ ಅಭಿವೃದ್ಧಿಗೆ 110 ಕೋ.ರೂ.

» ಮೊದಲನೇ ಪುಟದಿಂದ

ಕೋ.ರೂ. ರೈತರಿಗೆ ಪರಿಹಾರ ನೀಡಲಾಗಿದೆ ಎಂದು ಉತ್ತರ ನೀಡಿದರು.

ಈ ವೇಳೆ ಆಡಳಿತ ಮತ್ತು ವಿರೋಧ ಪಕ್ಷದವರ ಮಧ್ಯೆ ಕೆಲಕಾಲ ಮಾತಿನ ಚಕಮಕಿ ನಡೆದ ಸದನವನ್ನು 10 ನಿಮಿಷಗಳ ಕಾಲ ಮುಂದೂಡಲಾಯಿತು. ಸದನ ಮತ್ತೆ ಸೇರಿದಾಗ ಮಾತನಾಡಿದ ಮುಖ್ಯಮಂತ್ರಿ, ಸಭಾ ನಾಯಕರು ಮಾತನಾಡುವಾಗ ಮಧ್ಯೆ ಮಾತನಾಡುವುದು ಸರಿಯಲ್ಲ, ವಿಧಾನಮಂಡಲದಲ್ಲಿ ಗುಣಾತ್ಮಕ ಚರ್ಚೆಗಳು ಕಡಿಮೆಯಾಗುತ್ತಿರುವ ಬಗ್ಗೆ ಸಾರ್ವಜನಿಕರಲ್ಲಿ ಅಸಮಾಧಾನವಿದೆ ಎಂದು ಹೇಳಿದರು.

ಜಾನುವಾರು ಹತ್ಯೆ ಪ್ರತಿಬಂಧಕ ಕಾಯ್ದೆ ತಿದ್ದುಪಡಿಗೆ ವಿರೋಧ

» ಮೊದಲನೇ ಪುಟದಿಂದ

ಜಾನುವಾರು ಸಾಗಾಟ ಮಾಡುವಂತೆ ಕಾನೂನು ಜಾಗೃತಿ ಮಾಡಬೇಕೆಂದು ಒತ್ತಾಯಿಸಿದರು.

ಈ ಕಾಯ್ದೆ ಕೇವಲ ಜಾನುವಾರು ವಧೆ ನಿಷೇಧಿಸುವ ಉದ್ದೇಶ ಮಾತ್ರವಲ್ಲದೆ ಸಂರಕ್ಷಣಾ ಕಾಯ್ದೆಯೂ ಆಗಿದೆ. ಸಾಗಾಟದ ಸಮಯದಲ್ಲಿ ಜಾನುವಾರುಗಳಿಗೆ ವಾಹನದ ಮಾಲೀಕರು ನೀಡುವ ಹಿಂಸೆ, ಗಾಯಗಳಿಂದ ಸಂರಕ್ಷಣೆ ಮಾಡುವ ಉದ್ದೇಶವನ್ನು ಹೊಂದಿದೆ. ಅದಕ್ಕಾಗಿ ಜಾನುವಾರು ಸಾಗಾಟ ನಿಯಮಾವಳಿಗಳನ್ನು ವಾಹನ ಮಾಲೀಕರು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಮನೋಭಾವ ಸೃಷ್ಟಿಯಾಗಲು ಬಿಗಿಯಾದಂತ ಕಾನೂನು ರಚಿಸಲಾಗಿತ್ತು. ಈಗ ಕಾಯ್ದೆಯನ್ನು ದುರ್ಬಲಗೊಳಿಸುವ ಮೂಲಕ ಕಾಂಗ್ರೆಸ್ ಸರ್ಕಾರ ಗೋ ಹಂತಕರ ಪರ ನಿಂತಿದೆ ಎಂದು ಆರೋಪಿಸಿದರು.

ಕಾಯ್ದೆಗೆ ತಿದ್ದುಪಡಿ ತಂದರೆ ಗೋವುಗಳಿಗೆ ಹಿಂಸೆ ಹಾಗು ಹತ್ಯೆ ಹೆಚ್ಚಾಗಲಿದೆ. ಹಿಂದೂಗಳಿಗೆ ಪೂಜನೀಯವಾಗಿರುವ ಗೋವು ಹತ್ಯೆಗೆ ಕಾಂಗ್ರೆಸ್ ಸರ್ಕಾರ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಸಂವಿಧಾನದ ಆರ್ಟಿಕಲ್ 51ಎ ಪ್ರಕಾರ ಜೀವಿಗಳಿಗೆ ಕರುಣೆ ತೋರಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯವಾಗಿದೆ. ಇದು ಕರ್ನಾಟಕ ಸರ್ಕಾರಕ್ಕೂ ಅನ್ವಯವಾಗುತ್ತದೆ. ಆದ್ದರಿಂದ ಸಂವಿಧಾನದ ರಕ್ಷಣೆಗಾಗಿ ಈ ತಿದ್ದುಪಡಿಯನ್ನು ವಿಧಾನಸಭೆಯಲ್ಲಿ ಮಂಡಿಸದಂತೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ ಜಿಲ್ಲಾಡಳಿತದ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಪ್ರಧಾನ ಕಾರ್ಯದರ್ಶಿ ಅಮಿತ್ ಶೆಟ್ಟಿ, ನಗರಸಭೆ ಮಾಜಿ ಅಧ್ಯಕ್ಷ ಮೋಹನ್ ಕುಮಾರ್, ವೇದಾವತಿ ಮತ್ತಿತರರು ಹಾಜರಿದ್ದರು.

ಇಂದಿನಿಂದ ಬೂಕನ ಬೆಟ್ಟ ಜಾತ್ರೆ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಬೂಕನ ಬೆಟ್ಟದಲ್ಲಿ ಜ.10 ರಿಂದ ಜ.21ರವರೆಗೆ ನಡೆಯುವ ಶ್ರೀರಂಗನಾಥಸ್ವಾಮಿ ಜಾತ್ರೆಗೆ ಬರುವ ಜಾನುವಾರಗಳಿಗೆ ಮತ್ತು ಎತ್ತಿನ ಗಾಡಿಗೆ ಸುಂಕ ವಸೂಲಾತಿ ಇರುವುದಿಲ್ಲ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಹೇಳಿದರು.

ತಾಲೂಕಿನ ಪುರಾಣ ಪ್ರಸಿದ್ಧ ಬೂಕನಬೆಟ್ಟದಲ್ಲಿ ಏರ್ಪಡಿಸಿದ್ದ ಜಾತ್ರಾ ಮಹೋತ್ಸವದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿ, ಉತ್ತಮ ಎತ್ತುಗಳಿಗೆ 2 ಗ್ರಾಂ ಚಿನ್ನವನ್ನು ಬಹುಮಾನವಾಗಿ ಕೊಡಲಾಗುವುದು. ಸಭೆಯ ಪ್ರಾರಂಭದಲ್ಲಿ ರಾಸುಗಳ ಸುಂಕವನ್ನು ಕೈ ಬಿಡುವಂತೆ ರೈತ ಮುಖಂಡರು ಕೇಳಿದ್ದಾರೆ. ಇತರೆ ಸುಂಕಗಳ ಬಹಿರಂಗ ಹರಾಜು ಪ್ರಕ್ರಿಯೆಯನ್ನು ತಹಶೀಲ್ದಾರ್ ದಿನಾಂಕವನ್ನು ನಿಗದಿಪಡಿಸಿ ನಡೆಸುತ್ತಾರೆಂದು ತಿಳಿಸಿದರು.

ಮತಿಘಟ್ಟ ಪಂಚಾಯಿತಿ ವತಿಯಿಂದ ವಿದ್ಯುತ್ ದೀಪಗಳ ವ್ಯವಸ್ಥೆಯನ್ನು, ಬೆಳಗೀಹಳ್ಳಿ ಪಂಚಾಯಿತಿ ವತಿಯಿಂದ ಕುಡಿಯುವ ನೀರು ಸರಬರಾಜಿಗೆ ಸಂಬಂಧಿಸಿದ ಸೌಲಭ್ಯಗಳನ್ನು ಮಾಡುಬೇಕು ಎಂದರು.

ಗ್ರಾಮೀಣ ಕ್ರೀಡೆಗಳನ್ನು ಹಿರೀಸಾವೆ ಗ್ರಾಮ ಪಂಚಾಯಿತಿಯವರ ನೇತೃತ್ವದಲ್ಲಿ ಮತ್ತು ಕೃಷಿ ಮತ್ತು ತೋಟಗಾರಿಕೆ ಇಲಾಖೆಯವರು ಕೃಷಿ ಮೇಳವನ್ನು ಆಯೋಜಿಸಬೇಕು. ಪಶು ಸಂಗೋಪನಾ ಮತ್ತು ಆರೋಗ್ಯ ಇಲಾಖೆಯವರು ಜಾತ್ರೆಯಲ್ಲಿ ಕರ್ತವ್ಯ ನಿರ್ವಹಿಸಬೇಕು. ಸೆಸ್ಕ್ ವತಿಯಿಂದ ತಾತ್ಕಾಲಿಕವಾಗಿ 63 ಕೆ.ವಿ. ವಿದ್ಯುತ್ ಪರಿವರ್ತಕವನ್ನು (ಟಿಸಿ) ಆಳವಡಿಸುವಂತೆ ಶಾಸಕರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ರೈತರ ಪರವಾಗಿ ಹೆಚ್.ಎಸ್.ರವಿಕುಮಾರ್, ಹೆಗ್ಗಡಿಹಳ್ಳಿ ಕೃಷ್ಣಮೂರ್ತಿ, ಮತಿಘಟ್ಟ ನಾಗೇಶ್, ರಂಗಸ್ವಾಮಿ, ಜನಿವಾರ ಸಂತೋಷ್, ಬೊಮ್ಮೇನಹಳ್ಳಿ ಗಿರೀಶ್, ಸುಂಡಹಳ್ಳಿ ರವಿ, ಕೃಷಿ ಸಂದೀಪ್, ಬೂಕದ ರಾಶಿಗೌಡ ಮತ್ತಿತರರು ಮಾತನಾಡಿದರು.

ಸಭೆಯಲ್ಲಿ ತಹಶೀಲ್ದಾರ್ ಜಿ.ಎಸ್. ಶಂಕರಪ್ಪ, ಉಪ ತಹಶೀಲ್ದಾರ್ ರವಿ, ಪಿಎಲ್‌ಡಿಬಿ ಅಧ್ಯಕ್ಷ ಬಿ.ಎಂ.ಮುಂಜುನಾಥ್, ಕೆಡಿಪಿ ನಾಮನಿರ್ದೇಶಿತ ಸದಸ್ಯ ಯೋಗೇಶ್, ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಮಹೇಶ್, ಮುಖಂಡರಾದ ಹೆಚ್.ಜಿ.ರಾಮಕೃಷ್ಣ, ಹೆಚ್.ಎಂ. ರಘು, ದೇವಸ್ಥಾನದ ಪಾರುಪತ್ತೇದಾರ ರಂಗರಾಜ್, ಆರ್‌ಐ ಯೋಗೇಶ್ ಸೇರಿ ತಾಲ್ಲೂಕಿನ ವಿವಿಧ ಇಲಾಖೆ ಅಧಿಕಾರಿಗಳು, ಜನಪ್ರತಿನಿಧಿಗಳು ಮತ್ತು ರೈತರು ಸಭೆಯಲ್ಲಿ ಭಾಗವಹಿಸಿದ್ದರು.

ದೇಶ ವಿಭಜನೆಗೆ ವಂದೇ ಮಾತರಂ ಗೀತೆ ತುಂಡರಿಸಿದ್ದೇ ಕಾರಣ: ಅಮಿತ್ ಶಾ

• ಪ್ರಜೋದಯ ವರದಿ

ನವದೆಹಲಿ: ಓಲೈಕೆ ರಾಜಕಾರಣಕ್ಕಾಗಿ ವಂದೇ ಮಾತರಂ ಗೀತೆಗೆ ಕತ್ತರಿ ಹಾಕಿದ್ದು ದೇಶದ ವಿಭಜನೆಗೆ ಕಾರಣವಾಯ್ತು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ರಾಜ್ಯ ಸಭೆಯಲ್ಲಿ ಮಂಗಳವಾರ ಹೇಳಿದ್ದಾರೆ.

ವಂದೇ ಮಾತರಂ ಗೀತೆಗೆ 150 ವರ್ಷ ತುಂಬಿದ ಸಂದರ್ಭದಲ್ಲಿ ಸಂಸತ್‌ನಲ್ಲಿ ಚರ್ಚೆಗೆ ಅವಕಾಶ ನೀಡಿರುವುದನ್ನು ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆಗೆ ಸಂಬಂಧ ಕಲ್ಪಿಸುತ್ತಿರುವುದಕ್ಕೆ ವಿರೋಧ ಪಕ್ಷಗಳ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ವಂದೇ ಮಾತರಂ ಎಂಬುದು ಭಾರತದ ಸಾಂಸ್ಕೃತಿಕ ರಾಷ್ಟ್ರೀಯತೆಯನ್ನು ಜಾಗೃತಗೊಳಿಸಿದ ಮಂತ್ರವಾಗಿದೆ. ಸ್ವಾತಂತ್ರ್ಯ ಆಂದೋಲನಕ್ಕೆ ಮಾತ್ರವಲ್ಲ ಇಂದಿಗೂ ಅದು ಪ್ರಸ್ತುತತೆ ಹೊಂದಿದೆ. ವಿಕಸಿತ ಭಾರತದತ್ತ ಮುನ್ನುಗ್ಗುತ್ತಿರುವ ದೇಶಕ್ಕೆ ಭವಿಷ್ಯದಲ್ಲೂ ಅದು ಪ್ರೇರಣೆಯಾಗಲಿದೆ ಎಂದರು. ವಂದೇ ಮಾತರಂ ಚರ್ಚೆಯ ಪ್ರಸ್ತುತತೆಯನ್ನು ಕೇಳಿದ ಕಾಂಗ್ರೆಸ್ ವಿರುದ್ಧ ಅಮಿತ್ ಶಾ



ಅವರು ವಾಗ್ದಾಳಿ ನಡೆಸಿದ್ದಾರೆ.

ಇಡೀ ಗೀತೆಯನ್ನು 2ನೇ ಚರಣಕ್ಕೆ ಗೀತೆಯನ್ನು ಮಿತಿಗೊಳಿಸಿದ ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರು ಅವರು ದೇಶವನ್ನೇ ವಿಭಜಿಸಿದರು. ಗೀತೆ ಕುರಿತು ಚರ್ಚೆ ಏಕೆ ನಡೆಸಬೇಕೆಂದು ಲೋಕಸಭೆಯಲ್ಲಿ ಕೆಲ ಸಂಸದರು ಸೋಮವಾರ ಪ್ರಶ್ನಿಸಿದ್ದಾರೆ. ಆದರೆ, ಅದು ಈ ಹೊತ್ತಿನ ಅಗತ್ಯವಾಗಿದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಾತ್ರವಲ್ಲ, ಇಂದು ಮತ್ತು 2047ರಲ್ಲಿ ವಿಕಸಿತ ಭಾರತವಾದಾಗಲೂ ಅದು ಪ್ರಸ್ತುತತೆ ಹಾಗೇ ಇರಲಿದೆ ಎಂದಿದ್ದಾರೆ.

ಬಂಗಾಳದ ಬಂಕಿಮ್ ಚಂದ್ರ ಚಟ್ಟೋಪಾಧ್ಯಾಯ ಅವರು ರಚಿಸಿದ ವಂದೇ ಮಾತರಂ ಅನ್ನು ಈ ದೇಶದ ಯುವ ಜನರಿಗೆ ತಲುಪಿಸಬೇಕು. ಮುಸಲ್ಮಾನರ ದಾಳಿಯನ್ನು ಸಹಿಸಿಕೊಂಡ ಮತ್ತು ದೇಶದಲ್ಲಿ ಹೊಸ ಸಂಸ್ಕೃತಿ ಹೇರಿದ ಬ್ರಿಟಿಷರ ವಿರುದ್ಧ ಈ ಗೀತೆ ರಚಿಸಲಾಗಿತ್ತು. ದೇಶವನ್ನು ತಾಯಿಗೆ ಹೋಲಿಸಿದ ಈ ಗೀತೆ ಹೊಸ ಸಂಸ್ಕೃತಿಯನ್ನು ಹುಟ್ಟುಹಾಕಿತು. ಕಾಶ್ಮೀರ ದಿಂದ ಕನ್ಯಾಕುಮಾರಿವರೆಗೆ ದೇಶದ ಜನರ ಹೃದಯಕ್ಕೆ ಹತ್ತಿರವಾದ ವಂದೇ ಮಾತರಂ ಗೀತೆ ಯನ್ನು ಹಾಡಿದರೆ ಹಲ್ಲೆ ನಡೆಸಲಾಗುತ್ತಿತ್ತು, ಇನ್ನೂ ಕೆಲವರನ್ನು ಜೈಲಿಗೆ ಅಟ್ಟಲಾಯಿತು. ಹೀಗಾಗಿಯೇ ದೇಶವನ್ನು ಜಾಗೃತಗೊಳಿಸುವ ಮಂತ್ರ ಎಂದು ಮಹರ್ಷಿ ಅರಬಿಂದೋ ಅವರು ಹೇಳಿದ್ದಾರೆಂದು ಅಮಿತ್ ಶಾ ರಾಜ್ಯಸಭೆಯಲ್ಲಿ ಹೇಳಿದರು.

ಭಾರತ ಎಂಬುದು ಒಂದು ದೇಶ. ಅದನ್ನು ವಿಭಜಿಸಲು ಯಾರಿಂದಲೂ ಸಾಧ್ಯವಿಲ್ಲ. ಅದರ ಗಡಿಗಳನ್ನು ನಮ್ಮ ಸಂಸ್ಕೃತಿ ನಿರ್ಧರಿಸುತ್ತದೆ ಮತ್ತು ನಾವೆಲ್ಲರೂ ಸಾಂಸ್ಕೃತಿಕವಾಗಿ ಒಂದಾಗಿದ್ದೇವೆ. ಹೀಗಾಗಿ ಅತ್ಯಂತ ಪ್ರಮುಖವಾದ ಸಾಂಸ್ಕೃತಿಕ ರಾಷ್ಟ್ರೀಯವಾದವನ್ನು ಬಂಕಿಮ್ ಚಂದ್ರ ಚಟ್ಟೋಪಾಧ್ಯಾಯ ಅವರುವಂದೇ ಮಾತರಂ ಗೀತೆ ಮೂಲಕ ಜಾಗೃತಗೊಳಿಸಿದರೆಂದು ನೆನಪಿಸಿಕೊಂಡಿದ್ದಾರೆ.

1937ರಲ್ಲಿ ವಂದೇ ಮಾತರಂನ 50ನೇ ವರ್ಷಾಚರಣೆ ಸಂದರ್ಭದಲ್ಲಿ ಜವಾಹರಲಾಲ್ ನೆಹರು ಅವರು ಗೀತೆಯನ್ನು ಎರಡು ಭಾಗಗಳಾಗಿ ವಿಭಜಿಸಿದರು ಮತ್ತು ಎರಡು ಚರಣಗಳಿಗೆ ಗಷ್ಟೇ ಸೀಮಿತಗೊಳಿಸಿದರು. ವಂದೇ ಮಾತರಂಗೆ ಕಾಂಗ್ರೆಸ್ಸಿಗರು ನೀಡುವ ಗೌರವವಿದು. ಈ ಹಂತದಿಂದಲೇ ದೇಶದಲ್ಲಿ ಓಲೈಕೆ ರಾಜಕಾರಣ ಆರಂಭವಾಯಿತು. ಇಲ್ಲವಾದರೆ ಭಾರತ ಎಂದಿಗೂ ಎರಡು ಹೋಳಾಗುತ್ತಿರಲಿಲ್ಲ. ಗೀತೆಯ 100ನೇ ವರ್ಷಾಚರಣೆ ಸಂದರ್ಭದಲ್ಲಿ ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಲಾಗಿತ್ತು ಎಂದು ಶಾ ವಾಗ್ದಾಳಿ ನಡೆಸಿದರು.

ಸ್ನೇಹಿತನ ಕೊಂದು ವಿಡಿಯೋ ಹರಿಬಿಟ್ಟ ಹಂತಕರು

» ಮೊದಲನೇ ಪುಟದಿಂದ

ಮೂವರು ಖಾಲಿ ಜಾಗಕ್ಕೆ ತೆರಳಿದ್ದರು. ಕೀರ್ತಿಯ ಮುಖಕ್ಕೆ ಕಲ್ಲಿನಿಂದ ಜಜ್ಜಿ ಹತ್ಯೆಗೈದ ಬಳಿಕ ತನ್